# ಇಳಕಲ್ಲ ಸೀರೆ

## (೧)

**ನೇಕಾರಿಕೆ ಇತಿಹಾಸ**

ಮನುಕುಲದ ಸಾಂಸ್ಕೃತಿಕ ಪರಂಪರೆಯ ವಿಕಾಸವನ್ನು ಏಕರೂಪದ ಸಾರ್ವತ್ರಿಕ ಸಿದ್ಧಾಂತಗಳ ಮೂಲಕ ವಿವರಿಸುವುದು ಇಂದಿಗೂ ಕಷ್ಟಸಾಧ್ಯದ ಮಾತಾಗಿದೆ. ಏಕೆಂದರೆ ಯುರೋಪಿನ ಮಧ್ಯಯುಗದ ಇತಿಹಾಸದ ಕಾಲವನ್ನು ಭಾರತಕ್ಕೆ ಅನ್ವಯಿಸಿ ವಿವರಿಸುವಾಗ ಇತಿಹಾಸದ ಎಳೆ ಎಲ್ಲಿಯೊ ತಪ್ಪಿಬಿಡುತ್ತದೆ. ಇದರಿಂದ ವಿಶ್ವದ ನಾಗರಿಕತೆಯ ವಿಕಾಸವನ್ನು ಒಂದೇ ದಾರದಲ್ಲಿ ಪೋಣಿಸುವದು ಇಂದಿಗೂ ಸಾಧ್ಯವಾಗಿಲ್ಲ. ಆದ್ದರಿಂದ ಇತಿಹಾಸದ ಪುನರ್ ರಚನೆ ಹಾಗೂ ನಿರ್ವಚನ ಕಾಲದ ಅಗತ್ಯವಾಗಿವೆ. ಚರಿತ್ರೆ ಹಾಗೂ ಇತಿಹಾಸ ಈ ಪದಗಳ ನಡುವೆ ಕೂದಲೆಳೆ ಸೀಳಿ ಅರ್ಥ ಹೊಮ್ಮಿಸುವ ಯತ್ನ ನಡೆದರೂ ಜಾಗತಿಕ ಇತಿಹಾಸದ ವಿವರಣೆಯ ಮೆಟ್ಟಲುಗಳು ಇಂದಿಗೂ ಸರಳವಾಗಿಲ್ಲ. Macro ವಿಶ್ಲೇಷಣೆಗೆ Micro ಅಂಶಗಳು ನಲುಗಿ ಹೋಗುತ್ತವೆ. ಮಾರ್ಗ ಪರಂಪರೆಗೆ ಒತ್ತು ಕೊಟ್ಟಾಗ ದೇಶೀ ಪರಂಪರೆ ಗೌಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಇಳಕಲ್ಲ ಸೀರೆಯ ಸಮಾಜೊ-ಆರ್ಥಿಕ ಸ್ಥಿತಿಗತಿ ಅವಲೋಕಿಸಬೇಕಾಗಿದೆ.

ಉತ್ಪಾದನೆ ಹಾಗೂ ಉಪಭೋಗದ ನೇರ ಸರಳ ಸಂಬಂಧದ ಕೊಂಡಿ ಇಂದು ಕಳಚಿ ಬಿದ್ದಿದೆ. ಮನುಷ್ಯ ತಾನು ಉತ್ಪಾದಿಸಿದ್ದನ್ನು ತಾನೇ ಉಪಭೋಗಿಸುವ ಹಂತ ದಾಟಿ, ಯಾರೋ ಉತ್ಪಾದಿಸಿದ ವಸ್ತುಗಳನ್ನು ತಾನು ಉಪಭೋಗಿಸುವ ಹಾಗು ತಾನು ಯಾರಿಗಾಗಿಯೊ ವಿಶಾಲ ಮಾರುಕಟ್ಟೆಗಾಗಿ ಉತ್ಪಾದಿಸುವ ಸಂದರ್ಭದಲ್ಲಿ ಬದುಕುತ್ತಿದ್ದಾನೆ. ಇಂತಹ ಸಂದರ್ಭದಲ್ಲಿ ಮಾನವನ ಸಮಾಜೊ-ಆರ್ಥಿಕ ಸಂಬಂಧಗಳು ಹೊಸ ತಿರುವು ಪಡೆದುಕೊಳ್ಳುತ್ತವೆ. ಈ ಉತ್ಪಾದನ ಸ್ವರೂಪದ ಬದಲಾವಣೆಯ ಹಿನ್ನೆಲೆಯಲ್ಲಿ ಬಟ್ಟೆಯ ಹುಟ್ಟು, ವಿಕಾಸ ಹಾಗೂ ಬಳಕೆಗಳ ಅಧ್ಯಯನ ಅಗತ್ಯ ಇದೆ.

ಅಲೆಮಾರಿಯಾಗಿದ್ದ ಮಾನವ ಸ್ಥಿರವಾಗಿ ಒಂದು ನೆಲೆಯಲ್ಲಿ ವಾಸಿಸಲು ಪ್ರಾರಂಭಿಸಿದ ಹಂತವನ್ನು ಕೃಷಿಯುಗದ ನಾಂದಿ ಎಂದು ಐತಿಹಾಸಿಕವಾಗಿ ನಂಬಲಾಗಿದೆ. ಪ್ರಾಚೀನ ಕಾಲದಲ್ಲಿ ನೈಸರ್ಗಿಕ ಗುಹೆ, ಹೊದರು ಪೊದರುಗಳಲ್ಲಿ ವಾಸಿಸುತ್ತಿದ್ದ ಮಾನವ ಅವುಗಳನ್ನು ತೊರೆದು ತಾನೇ ನಿರ್ಮಾಣ ಮಾಡಿದ ಗುಡಿಸಲು (ಆಶ್ರಯ) ಗಳಲ್ಲಿ ವಾಸಿಸಲು ಪ್ರಾರಂಭಿಸಿದ. ಆಗ ಆತ ರೂಪಿಸಿಕೊಂಡ ತಂತ್ರಜ್ಞಾನದ ಕಾಲದಿಂದ ಈಗಿನ ಕಾಂಕ್ರೆಟ್ ಕಾಡಿನಲ್ಲಿ ಜೀವಿಸುವ ಮಾನವನ ಸಂಕೀರ್ಣ ಬದುಕಿನತ್ತ ನೋಟ ಹರಿಸಿದಾಗ ಬದುಕಿನ ಹೆಜ್ಜೆಗಳು ಸರಳರೇಖಾತ್ಮಕವಾಗಿಲ್ಲ. ಅಲ್ಲದೆ ಕಳೆದ ಎರಡು ಶತಮಾನಗಳಿಂದ ಬದುಕಿನ ಬದಲಾವಣೆ ತೀವ್ರ ವೇಗ ಪಡೆದು ಕೊಂಡಿದೆ.

ಮರದ ತೊಗಟೆ, ಎಲೆ ಹಾಗೂ ತಾನು ಬೇಟೆಯಾಡಿದ ಪ್ರಾಣಿಗಳ ಚರ್ಮದಿಂದ ದೇಹ ರಕ್ಷಿಸಿಕೊಂಡ ಮಾನವ ಕ್ರಮೇಣ ಅವುಗಳಿಗೆ ಸೌಂದರ್ಯದ ಕಲ್ಪನೆ ಲೇಪಿಸಿರಬಹುದು. ನಗ್ನನಾಗಿದ್ದ ಪ್ರಾಚೀನ ಮಾನವನಿಗೆ ತನ್ನ ಗುಪ್ತಾಂಗಗಳ ಹಾಗೂ ಮಾನದ ಬಗ್ಗೆ ಅರಿವು ಬಂದ ಮೇಲೆ, ಅವುಗಳ ರಕ್ಷಣೆಗಾಗಿ ಉಡುಪು ತೊಡುವ ಕಲೆ ರೂಪಿಸಿಕೊಂಡಿರಬಹುದು. ಆದರೆ ಇಂತಹ ನಂಬಿಕೆಗಳನ್ನು ಇಂದು ನಂಬುವುದೇ ಕಷ್ಟ. ಏಕೆಂದರೆ ಮನುಕುಲ ಈಗ ಉಡುಪುಗಳ ವ್ಯಸನಿಯಾಗಿದೆ. ದೇವರು ಮನುಷ್ಯನನ್ನು ಸೃಷ್ಟಿಸಿದರೆ ಸುಂದರ ಮನುಷ್ಯನನ್ನು ಉಡುಪುಗಳು ಸೃಷ್ಟಿಸುತ್ತವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

'ಆಂಗ್ಲ ಭಾಷೆಯ 'cloth' ಎಂಬ ಶಬ್ದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಅರಿವೆ, ಬಟ್ಟೆ, ವಸ್ತ್ರ, ಕಪ್ಪಡ ಮುಂತಾದ ಶಬ್ದ ಬಳಕೆಯಾಗುತ್ತಿದೆ. Cloth ಶಬ್ದ ಜರ್ಮನ್ ಭಾಷೆಗಳ ಬಳಗದಿಂದ ಉತ್ಪತ್ತಿಯಾಗಿದೆ ಎಂದು ತಜ್ಞರ ಅಭಿಮತ. ಆದರೆ ಖಚಿತವಾಗಿ ಯಾವ ವಿಶಿಷ್ಟ ಭಾಷೆಯಿಂದ ಈ ಪದ ನಿಷ್ಪತ್ತಿಯಾಗಿದೆ ಎಂಬುದು ಇಂದಿಗೂ ರಹಸ್ಯ. 'ಅರಿವೆ' ಎಂದರೆ ಉಣ್ಣೆ, ಹತ್ತಿ, ಚರ್ಮ, ರೇಷ್ಮೆ ಅಂದರೆ ಪ್ರಾಣಿ ಹಾಗೂ ಸಸ್ಯಜನ್ಯ ಎಳೆಗಳಿಂದ ನಿರ್ಮಿತ ವಸ್ತು ಎಂದು ಹೇಳಬಹುದು. ಇತ್ತೀಚೆಗೆ ರಾಸಾಯನಿಕ ವಸ್ತುಗಳ ಎಳೆಗಳಿಂದಲೂ ಅರಿವೆ ಸಿದ್ಧವಾಗುತ್ತಿದೆ.

'ಕರ್ಪಟ' ಎಂಬ ಸಂಸ್ಕೃತ ಮೂಲ ಶಬ್ದದಿಂದ ಕಪಡಾ, ಕಪ್ಪಡ, ಕಾಪಡ ಎಂಬ ಶಬ್ದಗಳು ದೇವನಾಗರಿ ಭಾಷೆಯಲ್ಲಿ ಅಂಬೆಗಾಲಿಟ್ಟು ಬಂದಿವೆ ಎಂದು ಹೇಳಲಾಗುತ್ತಿದೆ. ಕರ್ಪಟ ಶಬ್ದವೆ ಕನ್ನಡದಲ್ಲಿ ಕಪ್ಪಡಿಯಾಗಿ ಬಳಕೆಯಾಗಿದೆ ಎಂದು ತಜ್ಞರ ಅಭಿಮತ. ಕರ್ಪಟ ಎಂದರೆ ಹರಕು ಅಥವಾ ಚಿಂದಿ ಬಟ್ಟೆ ಎಂಬ ಅರ್ಥವೂ ಇದೆ. ಕಪ್ಪಡಿ ಸಂಗಮ ಎಂದು ಹೇಳುವಾಗ ಚಿಂದಿಬಟ್ಟೆ ಧರಿಸುವ ಅವಧೂತರ ಅನುಭಾವಿಗಳು ಗುಂಪು ಅಲ್ಲಿ ಇತ್ತು ಎಂದು ಊಹಿಸಬಹುದೇನೊ! ದೇವರಿಗೆ ಹೊಲಿಸುವ ಗಲಿಪು ಅಂದರೆ ತುಂಡು ಬಟ್ಟೆಗಳನ್ನು ಒಂದಾಗಿ ಹೊಲಿಯುವ ಕ್ರಿಯೆಯನ್ನೂ ನೆನಪಿಸಿಕೊಳ್ಳಬಹುದು; ಚಿಂದಿ ಬಟ್ಟೆಗಳನ್ನು ಒಂದಾಗಿ ಹೊಲಿಯುವ ಕೌದಿಯನ್ನೂ ಸ್ಮರಿಸಿಕೊಳ್ಳಬಹುದು. ಸಂಸ್ಕೃತದ 'ಚೇರ್' ಶಬ್ದ ಕನ್ನಡದಲ್ಲಿ ಸೀರೆಯಾಗಿ ಬಳಕೆಗೆ ಬಂದಿದೆ ಎಂದು ಹೇಳಲಾಗುತ್ತದೆ. ಸೀರೆ ಮಹಿಳೆ ಮಾತ್ರ ಉಡುವ ವಸ್ತ್ರವಾಗಿದೆ. ಸೀರೆ ಶಬ್ದ ಸಾಡಿ, ಸ್ಯಾರಿಯಾಗಿ ಆಂಗ್ಲಭಾಷೆಗೆ ವಲಸೆ ಹೋಗಿದೆ. ಸೀತೆಯ ಸೆರಗಿನ ವಿವರಣೆ ದ್ರೌಪದಿ ವಸ್ತ್ರಾಪಹರನ ದಾಖಲೆ, ಸೀರೆ ಬಳಕೆಯ ಪ್ರಾಚೀನತೆಯನ್ನು ಸೂಚಿಸುತ್ತವೆ. ವೇದಗಳಲ್ಲಿ ನೇಕಾರಿಕೆ ಹಾಗೂ ಇದರ ಸಲಕರಣೆಗಳ ವಿವರಣೆ ಇದೆ. ಹಳೆಯ ಶಿಲಾಯುಗದಲ್ಲಿ ಚರ್ಮದಿಂದ ಉಡುಗೆ ತಯಾರಿಸುವ ಕಲೆ ಉತ್ತರ ಯುರೋಪಿನಲ್ಲಿ ಪ್ರಾರಂಭವಾಯಿತೆಂದು ತಜ್ಞರ ಅಭಿಪ್ರಾಯವಾಗಿದೆ. ಬಟ್ಟೆ ಉತ್ಪಾದನೆ ಹಾಗೂ ಉಡುಪು ತಯಾರಿಸುವ ಕಲೆ ತೀರ ಇತ್ತೀಚಿನದೆ. ಲೋಹದ ಸೂಜಿ ಬಳಕೆಯಲ್ಲಿ ಬರುವ ಮೊದಲು ಎಲುವುಗಳನ್ನು ಕೊಂಡಿ ಅಥವಾ ವಂಕಿ ಆಕಾರದಲ್ಲಿ ರೂಪಿಸಿ ಸೂಜಿಯನ್ನಾಗಿ ಬಳಸಿದ ಪಳಿಯುಳಿಕೆಗಳಿವೆ. ಲೋಹಯುಗದ ಪ್ರಾರಂಭದೊಂದಿಗೆ ಮನುಕುಲದ ಇತಿಹಾಸವೇ ಬದಲಾಯಿತು. ೧೬ನೇ ಶತಮಾನದಲ್ಲಿ ಇಂಗ್ಲಂಡ್ ದೇಶದಲ್ಲಿ ಲೋಹದ ಸೂಜಿ ಬಳಕೆಯಾದ ಮೇಲೆ ಉಡುಪುಗಳ ಕ್ಷೇತ್ರದಲ್ಲಿ ವಿಚಿತ್ರ ಬದಲಾವಣೆ ಕಾಣಿಸಿಕೊಂಡವು. ೧೭ನೇ ಶತಮಾನದ ನಂತರ ಉಡುಪುಗಳ ವಿನ್ಯಾಸದಲ್ಲಿ ಉಂಟಾದ ಬದಲಾವಣೆ ಇಡೀ ವಿಶ್ವವನ್ನೇ ವ್ಯಾಪಿಸಿದಂತೆ ಕಾಣುತ್ತದೆ. ಹೊಲಿಗೆ ಯಂತ್ರ ಉಡುಪುಗಳ ವಿನ್ಯಾಸದಲ್ಲಿ ನಿಜವಾದ ಕ್ರಾಂತಿ ತಂದಿತು. ಸೀರೆ ಹಾಗೂ ಧೋತರ ಅಖಂಡವಾಗಿರುವುದರಿಂದ ಇವುಗಳ ನೇಯ್ಗೆ ಹಾಗೂ ವಿನ್ಯಾಸದ ವಿಷಯಗಳಲ್ಲಿ ಮಂದಗತಿಯ ಬದಲಾವಣೆ ಕಾಣಬಹುದು.

ಭಾರತದಲ್ಲಿ ನೇಕಾರಿಕೆಯ ಕಲೆ ಅತ್ಯಂತ ಪ್ರಾಚೀನವಾದುದು ಎಂಬುದಕ್ಕೆ ಹರಪ್ಪ ಮಹಂಜೋದಾರೊದಲ್ಲಿ ದೊರೆತ ಅವಶೇಷಗಳೇ ಸಾಕ್ಷಿಯಾಗಿವೆ. ಈಜಿಪ್ತದ ಮಮ್ಮಿಗಳ ಸಿಂಗಾರಕ್ಕೆ ಭಾರತದ ಬಟ್ಟೆಗಳು ಬಳಕೆಯಾದ ದಾಖಲೆಗಳಿವೆ. ರೇಷ್ಮೆ ನೇಯ್ಗೆಯ ಕಲೆ ಚೀನದಿಂದ ಭಾರತಕ್ಕೆ ಬಂದ ದಂತಕತೆಗಳಿವೆ. ಪ್ರಾಚೀನ ಭಾರತದ ಕೈಮಗ್ಗದ ಉದ್ದಿಮೆಯ ಬಗ್ಗೆ ಪಾಹಿಯಾನ, ಹುಯೇನ್‌ತ್ಸಾಂಗ ಮುಂತಾದವರು ತಮ್ಮ ಪ್ರವಾಸ ಕಥನದಲ್ಲಿ ದಾಖಲಿಸಿದ್ದಾರೆ. ೧೮೧೮ರಲ್ಲಿ ಪ್ರಥಮ ಹತ್ತಿ ಗಿರಣಿ ಭಾರತದಲ್ಲಿ ಪ್ರಾರಂಭವಾಯಿತು.

ಕೃಷಿಯಂತೆ ನೇಕಾರಿಕೆಯ ಅಖಿಲ ಭಾರತ ಮಟ್ಟದ ವೃತ್ತಿಯಾಗಿದೆ. ಇವೆರಡೂ ವಿಶ್ವವ್ಯಾಪಿಯಾದ ವೃತ್ತಿಗಳೆಂದು ಹೇಳಬಹುದು. ಮೇಟಿ ಹಾಗೂ ರಾಟಿಯ ಬಗ್ಗೆ ಭಾವನಾತ್ಮಕ ಹೇಳಿಕೆಗಳುಂಟು. ಮೇಟಿಯಿಂದ ಅನ್ನ, ರಾಟಿಯಿಂದ ವಸ್ತ್ರ, ಮೇಟಿ ನಂಬಿದ ಕೃಷಿಕ ಮಳೆಗಾಳಿ ಬಿಸಿಲುಗಳಿಗೆ ತನ್ನನ್ನು ಒಡ್ಡಿಕೊಂಡರೆ, ರಾಟಿಯವನ ಕೆಲಸ ನೆರಳಲ್ಲಿ. ಆದರೆ ಎರಡೂ ವೃತ್ತಿ ಅವಲಂಬಿಸಿದವರು ಇಂದಿಗೂ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆಂಬುದು ಅಷ್ಟೇ ಸತ್ಯ.

ಭಾರತದಲ್ಲಿ ವೃತ್ತಿಗೂ ಜಾತಿಗೂ ನಿಕಟ ಸಂಬಂಧವಿದೆ. ಅನೇಕ ಜಾತಿಗಳ ಹೆಸರು ಅವು ಅನುಸರಿಸುವ ವೃತ್ತಿಯಿಂದಲೆ ರೂಪಗೊಂಡಿವೆ. ಒಂದು ಸಮೂಹದ ವೃತ್ತಿ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದು ಅದು ಒಳಬಾಂಧವ್ಯದ ಸಮೂಹವಾಗುತ್ತದೆ. ಅದೇ ಜಾತಿಯಾಗಿ ರೂಪುಗೊಂಡಿದೆ. ನೆಸ್‌ಫೀಲ್ಡ್‌ರಂತಹ ಶಾಸ್ತ್ರಜ್ಞರು ವೃತ್ತಿಯ ಹಿನ್ನೆಲೆಯಲ್ಲಿ ಜಾತಿಯ ಉಗಮವನ್ನು ಹುಡುಕುವ ಯತ್ನ ಮಾಡಿದ್ದಾರೆ. ಆದರೆ ಒಂದು ಗುಂಪು ಅನುಸರಿಸುವ ವೃತ್ತಿಯಿಂದಲೆ ಜಾತಿಯಂತಹ ಸಂಕೀರ್ಣ ವ್ಯವಸ್ಥೆ ಭಾರತದಲ್ಲಿ ರೂಪುಗೊಂಡಿದೆ ಎಮಬುದಕ್ಕೆ ಸಾಕಷ್ಟು ಪುರಾವೆಗಳಿಲ್ಲ.

ಕರ್ನಾಟಕದಲ್ಲಿ ನೇಯ್ಗೆ ವೃತ್ತಿಯಲ್ಲಿ ತೊಡಗಿದವರಿಗೆ ನೇಕಾರ, ಜಾಡ, ಸಾಳಿ(ಲೆ) ಮುಂತಾದ ಹೆಸರಿನಿಂದ ಕರೆಯುತ್ತಾರೆ. ದೇವಾಂಗ ಸಮುದಾಯ ಈ ವೃತ್ತಿಯಲ್ಲಿ ಪ್ರಮುಖವಾಗಿ ತನ್ನನ್ನು ತೊಡಗಿಸಿಕೊಂಡಿದೆ. ಸಾಂಪ್ರದಾಯಕ ಆನುವಂಶಿಕ ವೃತ್ತಿಯಲ್ಲಿ ಬದಲಾವಣೆಯಾದಮತೆ ನೇಯ್ಗೆಯ ವೃತ್ತಿ ಹಾಗೂ ಸೀರೆಯ ವ್ಯಾಪಾರ ಯಾವುದೇ ಒಂದು ಜಾತಿ ಗುಂಪಿನ ಸ್ವಾಮ್ಯದಲ್ಲಿ ಉಳಿದಿಲ್ಲ. ಬಹುತೇಕ ಎಲ್ಲ ಜಾತಿಗಳು ಈ ವೃತ್ತಿಯಲ್ಲಿ ಪ್ರವೇಶ ಪಡೆದಿವೆ. ನೇಕಾರಿಕೆ ವೃತ್ತಿಯಲ್ಲಿ ತೊಡಗಿಸಿಕೊಂಡ ಪ್ರಮುಖ ಸಾಂಪ್ರದಾಯಿಕ ಜಾತಿ ಗುಂಪುಗಳೆಂದರೆ ದೇವಾಂಗ, ಪಟ್ಟಸಾಲಿ, ಸ್ವಕುಳ ಸಾಳಿ, ಪದ್ಮಶಾಲಿ, ಕುರುವಿನಶೆಟ್ಟಿ, ತೊಗಟವೀರ, ಹಟಗಾರ ಮುಂತಾದವುಗಳು. ಇತ್ತೀಚೆಗೆ ಲಿಂಗಾಯತ, ಪಟ್ಟೆಗಾರ, ಮುಸ್ಲಿಂ, ಹರಿಜನರು ಕೂಡ ಈ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಬ್ರಾಹ್ಮಣರು ಇಲ್ಲಿ ಪ್ರವೇಶ ಪಡೆದಿಲ್ಲ ಎಂಬುದು ಗಮನಿಸಬೇಕಾದ ಅಂಶ.

ದೇವಾಂಗದವರು ದೇವಲ ಮಹರ್ಷಿ ತಮ್ಮ ಕುಲದ ಮೂಲ ಪುರುಷನೆಂದು ಗುರುತಿಸಿಕೊಳ್ಳುತ್ತಾರೆ. ದೇವರು ಹಾಗೂ ಮಾನವರ ಮಾನ ಮುಚ್ಚಲು ವಸ್ತ್ರ ನೀಡಿದವನೆ ದೇವಲ ಮಹರ್ಷಿ ಎಂಬ ಪುರಾಣ ಕತೆಯಿದೆ. ೧೧ನೇ ಶತಮಾನದ ಜೇಡರ ದಾಸಿಮಯ್ಯನೊಂದಿಗೆ ತಮ್ಮ ಮೂಲ ಗುರುತಿಸಿಕೊಳ್ಳುವ ನೇಕಾರರು ಇದ್ದಾರೆ. ಪಟ್ಟಸಾಲಿಯವರಿಗೆ ಸಾಲೇಶ್ವರ, ಪದ್ಮಶಾಲಿಯವರಿಗೆ ಮಾರ್ಕಂಡೇಶ್ವರ, ಸ್ವಕುಳಸಾಳಿಯವರಿಗೆ ಜಿಹ್ವೇಶ್ವರ (ದತ್ತಾತ್ರೇಯ), ಕುರುಹಿನಶೆಟ್ಟಿಯವರಿಗೆ ನೀಲಕಂಠೇಶ್ವರ ಆರಾಧ್ಯದೈವರಾಗಿದ್ದಾರೆ. ಈ ಎಲ್ಲ ಜಾತಿ ಗುಂಪುಗಳು ಒಳಬಾಂಧವ್ಯ ನೀತಿ

ಅನುಸರಿಸುತ್ತವೆ. ಇವುಗಳಲ್ಲಿಯೆ ಕೆಲವು ಉಪಜಾತಿಗಳಿವೆ. ಅಲ್ಲದೆ ಕರಿ-ಬಿಳಿ, ಹಿರೇ-ಚಿಕ್ಕ, ಅರಿಸಿನ ಪತ್ತಲ-ಬಿಳಿ ಪತ್ತಲ ಎಂಬ ವಿಂಗಡನೆಗಳಿವೆ. ಉಪಜಾತಿಗಳಲ್ಲಿಯೂ ಶ್ರೇಣೀಕೃತ ವಿಂಗಡಣೆಯಾಗಿ ಒಳಬಾಂಧವ್ಯ ಅನುಸರಿಸಲಾಗುತ್ತದೆ. ಇವರಲ್ಲಿ ಸಸ್ಯಾಹಾರಿ ಹಾಗೂ ಮಾಂಸಾಹಾರಿಗಳು ಇದ್ದಾರೆ. ಸಾಮಾನ್ಯವಾಗಿ ಸೀರೆ ಕಪ್ಪು-ಕರಿ ಬಟ್ಟೆಗಳ ಪಟ್ಟಿಯಲ್ಲಿ ಬರುತ್ತದೆ. ಕಪ್ಪು-ಕರಿ ಬಟ್ಟೆ ನೇಯುವ ನೇಕಾರರು ಕರಿಜಾಡರಾಗಿ, ಪುರುಷರ ಬಟ್ಟೆ ನೇಯುವ ನೇಕಾರರು ಬಿಳಿ ಜಾಡರೆಂದು ಗುರುತಿಸಿಕೊಂಡಿದ್ದಾರೆ. ಕರಿಜಾಡರಿಗಿಂತ ಬಿಳಿಜಾಡರು ಶ್ರೇಷ್ಠ ಎಂಬ ನಂಬಿಕೆ ಇದೆ. ಬಹುಶಃ ಪುರುಷ ಪ್ರಣೀತ ಮೌಲ್ಯಗಳು ಇದಕ್ಕೆ ಕಾರಣವಾಗಿರಬಹುದು. ಒಟ್ಟಿಗೆ ನೇಕಾರರನ್ನು ದ್ರಾವಿಡ ಮೂಲರೆಂದು ಹೇಳಬಹುದು. ಏಕೆಂದರೆ ಹಿಂದೂ ತ್ರಿವಳಿ ದೇವರುಗಳಲ್ಲಿ ಒಬ್ಬನಾದ ಶಿವ ಹಾಗೂ ಆತನ ಗಣದ ದೇವರುಗಳನ್ನೇ ಇವರು ಪೂಜಿಸುತ್ತಾರೆ. ಭಾರತದ ಎಲ್ಲ ಜಾತಿಗಳಂತೆ ನೇಕಾರಿಕೆಯಲ್ಲಿ ತೊಡಗಿದ ಜಾತಿಗಳು ಸಂಸ್ಕೃತೀಕರಣಕ್ಕೆ ಪಕ್ಕಾಗಿವೆ. ನೇಪಾಳದ ದೊರೆ ಮನೆತನದವರು ವರ್ಷದಲ್ಲಿ ಒಂದು ಬಾರಿ (ದಸರಾ ಹಬ್ಬದಲ್ಲಿ) ಸಾಂಪ್ರದಾಯಕವಾಗಿ ನೇಯುತ್ತಾರೆ. ಆದ್ದರಿಂದ ಅವರೂ ಒಂದು ಕಾಲಕ್ಕೆ ನೇಕಾರರು ಆಗಿದ್ದರು ಎಂಬ ಅಂಶವನ್ನು ನೇಯ್ಗೆ ಜಾತಿಯವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಮಲೇಶಿಯಾದಲ್ಲಿ ದೇವಾಂಗ ಸಮಾಜ ಇದೆಯಂತೆ. ಕರ್ನಾಟಕದಲ್ಲಿ ನೇಕಾರ ಜಾತಿ ಗುಂಪುಗಳು ಲಿಂಗಾಯತೀಕರಣಗೊಂಡಿವೆ. ಇಲ್ಲಿಯ ನೇಕಾರ ಜಾತಿ ಗುಂಪುಗಳು ಸಂಘಟನೆ ಹೊಂದಿ ತಮ್ಮವೇ ಆದ ಮಠ ಹಾಗೂ ಇತರ ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿವೆ. ಉದಾಹರಣೆಯಾಗಿ ಹಂಪೆಯ ಹೇಮಕೂಟ ಮಠ. ವಿಜಯನಗರ ಅರಸರ ಇತಿಹಾಸ ಹೊಂದಿದ ಈ ಮಠ ಈಗ ದೇವಾಂಗ ಸಮಾಜದ ಮಠವಾಗಿಯೇ ಗುರುತಿಸಲ್ಪಡುತ್ತದೆ. ದೇವಲ ಮಹರ್ಷಿ, ಸಾಲೇಶ್ವರ, ಜೇಹ್ವೇಶ್ವರ ಮುಂತಾದ ದೇವರುಗಳ ಬಗೆಗೆ ಸಾಮಾನ್ಯವಾಗಿರುವ ದಂತಕತೆ ಎಂದರೆ ಮಾನ ಮುಚ್ಚಲು ಮನುಕುಲಕ್ಕೆ ಮೊದಲು ವಸ್ತ್ರ ನೀಡಿದವರೆ ಇವರು ಎಂಬ ನಂಬಿಕೆ.

**ನೇಕಾರ: ಒಂದು ಟಿಪ್ಪಣಿ**

**ದೇವಾಂಗನ ಏಳು ಅವತಾರಗಳು**

ನೈಮಿಷಾರಣ್ಯದಲ್ಲಿ ತಪೋಧನರಾದ ಶೌನಕ ಮೊದಲಾದ ಮುನಿಪುಂಗವರು ಬಹುಕಾಲ ನಡೆದ ದೀರ್ಘಸತ್ರ ಯಾಗ ಮಾಡುತ್ತಿದ್ದರು. ಇವರನ್ನು ಕಾಣ ಬಯಸಿ ವ್ಯಾಸ ಶಿಷ್ಯ, ಮಹಾತಪಸ್ವಿ ಜ್ಞಾನಿ ಸೂತ ಪುರಾಣಿಕ ಅಲ್ಲಿಗೆ ಬಂದನು. ಋಷಿಗಳು ಸ್ವಾಗತಿಸಿ, ಸತ್ಕರಿಸಿ, ಸೂತ್ರ, ವಸ್ತ್ರಗಳ ಕರ್ತೃವೇ ಮುಂತಾದ ವಿಷಯಗಳನ್ನು ವಿವರವಾಗಿ ತಿಳಿಸಬೇಕೆಂದು ಕೇಳಿದರು. ಸೂತ ಪುರಾಣಿಕ ಸಂತೋಷದಿಂದ ಷಣ್ಮುಖನಿಗೆ ಈಶ್ವರ ತಿಳಿಸಿದ ದೇವಾಂಗನ ಪುಣ್ಯಕತೆಯನ್ನು ಹೇಳಿದನು.

ದೇವಾಂಗ ಪರಬ್ರಹ್ಮ ಪ್ರಪಂಚವನ್ನು ಸೃಷ್ಟಿಸಬೇಕೆಂದು ಆಶಿಸಿ ಪರಶಿವೆ ಆದಿಶಕ್ತಿ ಯನ್ನು ಹುಟ್ಟಿಸಿದನು. ಆದಿಶಕ್ತಿಯ ರಜೋಗುಣದಿಂದ ಬ್ರಹ್ಮ, ಸತ್ವಗುಣದಿಂದ ವಿಷ್ಣು. ತಮೋಗುಣದಿಂದ ರುದ್ರ ಜನಿಸಿದರು.

ಬ್ರಹ್ಮನಿಂದ ಸೃಷ್ಟಿಯಾದ ದೇವಮಾನವರೆಲ್ಲರೂ ಬೆತ್ತಲೆಯಲ್ಲಿದ್ದರು. ಅವರು ಎಲೆಗಳು, ಮರದ ತೊಗಟೆಗಳನ್ನು ಮೈಗೆ ಸುತ್ತಿಕೊಂಡರು. ಈ ದುರವಸ್ಥೆಯನ್ನು ನೋಡಿದ ನಾರದ ಬ್ರಹ್ಮನನ್ನು ಕೇಳಿಕೊಂಡು ದೇವತೆಗಳ ಸಮೇತ ಕೈಲಾಸಪತಿ ಬಳಿಗೆ ಬಂದರು. ನೀಲಕಂಠ ಇವರು ಬಂದ ವಿಷಯವನ್ನರಿತು. ಉಗ್ರ ಧ್ಯಾನದಲ್ಲಿ ತನ್ಮಯನಾದಾಗ, ಶಿವನ ಫಾಲನೇತ್ರದಿಂದ ಜ್ಯೋತಿ ಹುಟ್ಟಿ ಪುರುಷ ರೂಪ ತಾಳಿತು. ಜಟಾಧಾರಿ, ದಂಡಾಜಿನ ಕಮಂಡಲು ಧರಿಸಿ, ಮಹಾ ತೇಜಸ್ವಿ, ದರ್ಭಪಾಣಿ, ನಿರ್ಮಲ ಜ್ಞಾನಿ, ಮೇಧಾವಿ, ಜಿತೇಂದ್ರಿಯಿ, ಯಜ್ಞೋಪವೀತಧಾರಿ, ಸತ್ಯವಾದಿ, ವ್ರತವಾದಿ, ಕುಶಲಿ, ಕೀರ್ತಿಭೂಷಣನಾದ ಇವನಿಗೆ ಪರಮೇಶ್ವರ ದೇವಲನೆಂದು ಹೆಸರಿಟ್ಟನು. ಶಿವನನ್ನು ದೇವಲ ಪರಿಪರಿಯಾಗಿ ಸ್ತುತಿಸಿ "ನನ್ನನ್ನೇಕೆ ನಿರ್ಮಿಸಿದೆ, ನನ್ನ ಜನ್ಮದಿಂದ ಲಾಭವೇನು. ನನ್ನ ಕಾರ್ಯವೇನು?" ಎಂದು ಬಿನ್ನವಿಸಿದನು. "ಲೋಕೋಪಕಾರಕ್ಕಾಗಿ ನಿನ್ನನ್ನು ನಿರ್ಮಿಸಿರುವೆ, ೬ ಜನ್ಮ ತಾಳಿ ಕೀರ್ತಿ ಗಳಿಸಿ ೭ನೆಯ ಜನ್ಮದಲ್ಲಿ ನನ್ನಲ್ಲಿ ಮೋಕ್ಷ ಹೊಂದುವಿ. ನನ್ನಿಂದ ವೇದಗಳು ಹುಟ್ಟುವಾಗಲೇ ಒಡಹುಟ್ಟಿದ ತಂತುಗಳು ವಿಷ್ಣುವಿನ ಹೊಕ್ಕುಳಲ್ಲಿವೆ. ನೀನು ವಿಷ್ಣುವಿಂದ ಅವನ್ನು ಪಡೆದು ಕುಶಲತೆಯಿಂದ ನೇಯ್ದು ಸಕಲರಿಗೂ ಕೊಟ್ಟು ಅವರ ಮಾನ, ಮರ್ಯಾದೆಗಳನ್ನು ಕಾಪಾಡು, ವಸ್ತ್ರಗಳನ್ನು ದೇವತೆಗಳಿಗೆ ಕೊಟ್ಟು ಅವರ ಅಂಗಗಳನ್ನು ಅಲಂಕರಿಸಿ ದೇವಾಂಗನೆಂಬ ಹೆಸರು ಪಡೆ. ಭರತ ಖಂಡದ ಸಗರ ದೇಶ ರಾಜಧಾನಿಯಾದ ಅಮೋದ ಪಟ್ಟಣದಲ್ಲಿ ರಾಜನಾಗಿ ನಿಂತು ರಾಜ್ಯ ಪರಿಪಾಲಿಸಿ ಪ್ರಪಂಚದಲ್ಲಿ ಯಶಸ್ವಿಯಾಗು. ನಿನ್ನ ವಂಶದವರು ದಾನಿಗಳು, ಸತ್ಯ ಸಂಪನ್ನರು. ಪರೋಪಕಾರಿಗಳು, ಸದಾಚಾರಿ ದೇವ ಬ್ರಾಹ್ಮಣ ವಿಶ್ವಾಸಿಗಳಾಗಿರುವರು" ಎಂದನು. ದೇವಲ ಪಾರ್ವತಿಯನ್ನು ಪ್ರಾರ್ಥಿಸಿದಾಗ, ಸಮಯ ಬಿದ್ದಾಗ ಸ್ಮರಿಸಿದ ಕೂಡಲೇ ಸಹಾಯಕ್ಕೆ ಬರುವ ವಚನವಿತ್ತಳು.

**ಚೌಡೇಶ್ವರಿ ವರಪ್ರಸಾದ:** ಮಹಾ ತೇಜಸ್ವಿ ದೇವಲ ಕ್ಷೀರ ಸಾಗರಕ್ಕೆ ಹೋಗಿ ಸುವರ್ಣಾಶ್ರಮಕ್ಕೆ ಬಂದು, ವಿಷ್ಣುವನ್ನು ಸ್ತುತಿಸಿ ನೇಮದಿಂದ ಮಾಡಿದ ತಪಸ್ಸಿಗೆ ಮೆಚ್ಚಿದ ನಾರಾಯಣ ಕಾಣಿಸಿಕೊಂಡು, ಏನಾಗಬೇಕೆಂದು ಕೇಳಿದನು. ಆಗ, ವಸ್ತ್ರಗಳನ್ನು ನಿರ್ಮಿಸಲು ನಿನ್ನ ನಾಭಿಕಮಲದಲ್ಲಿರುವ ತಂತುಗಳು ಬೇಕೆಂದನು. ಪುರುಷೋತ್ತಮ ತಂತುಗಳನ್ನು ಕೊಟ್ಟು, "ನಿನ್ನ ಕೆಲಸದಲ್ಲಿ ಮಾಯಾವಿ ದೈತ್ಯರು ವಂಚಿಸುವರು. ಜಾಗರೂಕನಾಗಿದ್ದು ಜಯಿಸು" ಎಂದು ತನ್ನಲ್ಲಿದ ಒಂದು ಚಕ್ರವನ್ನೂ ಕೊಟ್ಟನು.

ದೇವಲ ಜಂಬೂದ್ವೀಪಕ್ಕೆ ಬಂದು ಉಪ್ಪು ಸಮುದ್ರದಲ್ಲಿ ಮನೋಹರವಾದ ಕೃತ್ರಿಮಾಶ್ರಮವನ್ನು ಕಂಡು ಒಳಹೊಕ್ಕನು. ಅಲ್ಲಿದ್ದ ಕಪಟ ಋಷಿ, ದೇವಲ ಯಾರು, ಏಕೆ ಬಂದಿರುವೆ ಎಂದು ವಿಚಾರಿಸಿಕೊಂಡನು. ತಾನು ಶಿವನ ಮಾನಸ ಪುತ್ರ, ಹೆಸರು ದೇವಲ, ವಿಷ್ಣುವಿಂದ ತಂತುಗಳನ್ನು ತಂದಿರುವೆ ಎಂದನು. ಆಶ್ರಮದಲ್ಲಿ ರಾತ್ರಿ ತಂಗಿದ್ದು ಬೆಳಿಗ್ಗೆ ಹೋಗಬಹುದೆಂದಾಗ ದೇವಲ ಅಲ್ಲಿಯೇ ಉಳಿದನು.

ನಡುರಾತ್ರಿಯಲ್ಲಿ ಕಪಟ ಮುನಿಯ ಶಿಷ್ಯರು ದೇವಲನನ್ನು ಕೊಲ್ಲಲು ಹವಣಿಸಿದಾಗ ದೇವಲ ವಿಷ್ಣು ಕೊಟ್ಟಿದ್ದ ಚಕ್ರವನ್ನು ಅವರ ಮೇಲೆ ಬಿಟ್ಟನು. ಆ ಚಕ್ರ ದೈತ್ಯ ಸೇನೆಯನ್ನು ನಾಸಮಾಡತೊಡಗಿತು. ದೈತ್ಯರು ದಿಕ್ಕಾಪಾಲಾದರು. ಆದರೆ, ದೈತ್ಯರಲ್ಲಿ ಬಲಶಾಲಿಗಳಾದ ವಜ್ರಮುಷ್ಠಿ, ಧೂಮ್ರವಕ್ರ, ಧೂಮ್ರಾಸ್ಯ, ಚಿತ್ರಸೇನ, ಪಂಚಸೇನರೆಂಬ ಐವರು ಬಾಣಗಳ ಮಳೆ ಸುರಿಸಿದಾಗ, ಈ ಪಂಚ ದೈತ್ಯರು ಹಿಂದೆಂದೋ ವಿಷ್ಣುವಿಂದ ಪಡೆದಿದ್ದ ವರದ ಫಲವಾಗಿ ಈ ಚಕ್ರ

ಅಸಮರ್ಥವಾದಾಗ ತಡೆಯಲಾರದೆ ಲೋಕ ಮಾತೆ ಪಾರ್ವತಿ ದೇವಿಯನ್ನು ಕಾಪಾಡೆಂದು ಸ್ತುತಿಸಿದಾಗ ಪ್ರಸನ್ನಳಾಗಿ ತಾನು ಕೊಟ್ಟಿದ್ದ ವರದಂತೆ, ಚಂಡಿಕಾಂಬೆ, ಮಹಾಬಲೆ, ಚೌಡೇಶ್ವರಿ ರೂಪ ತಾಳಿ ರಾಕ್ಷಸರನ್ನು ಶೂಲಾಯುಧದಿಂದ ಕೊಂದಳು. ಐವರು ರಾಕ್ಷಸರ ೫ ಬಣ್ಣಗಳ ರಕ್ತಗಳಲ್ಲಿ ತಾನು ತಂದಿದ್ದ ತಂತುಗಳನ್ನು ಅದ್ದಿ ದೇವಲ ಪಂಚ ವರ್ಣಗಳನ್ನು ತಯಾರಿಸಿದನು. ಜನರು ತಮ್ಮ ರಕ್ತವನ್ನು ಮೈಮೇಲೆ ಧರಿಸುವಂತೆ ಶಿವನಿಂದ ಈ ಐವರು ವರ ಪಡೆದಿದ್ದು ಕೈಗೂಡಿತು. ಚೂಡಾ ಸಂಬಂಧದ ಪ್ರಭಾಜಾಲಗಳಿಂದ ದೈತ್ಯರನ್ನು ದಮನಗೊಳಿಸಿದ್ದರಿಮದ ತ್ರಿಭುವನೇಶ್ವರಿ, ಚಂಡಿಕಾಂಬೆಗೆ ಚೌಡೇಶ್ವರಿ, (ಚೂಡೇಶ್ವರೀ) ಎಂದು ಹೆಸರಾಯಿತು.

**ವಸ್ತ್ರ ನಿರ್ಮಾಣ:** ಅರಸನಾದ ದೇವಲನು ಬಟ್ಟೆಗಳನ್ನು ನೇಯಲು ಸಂಕಲ್ಪಿಸಿದನು. ಅದಕ್ಕೋಸ್ಕರ ಮೇರುಗಿರಿಯಿಂದ ನೇಯ್ಗೆ ಸಾಮಗ್ರಿಗಳನ್ನು ತಂದನು. ಬರುವಾಗ ದಾರಿಯಲ್ಲಿ ವಾಮದೇವ ಮುನಿಯ ಕೋರಿಕೆಯಂತೆ ಕುಂಡಿಕನೆಂಬ ರಾಕ್ಷಸನನ್ನು ಕೊಂದನು. ವಿಶ್ವಕರ್ಮನ ಮಗ, ಕುಶಲಿಯಾದ ಮಯ ವಜ್ರದ ಕುಂಟೆ, ರತ್ನ ಖಚಿತ ಹಲಗೆ, ಸ್ಯೂತಿ, ಮರಕತ ಲಾಳಿ, ಗಣಿಕೆ, ವಿಚಿತ್ರ ರಾಟೆ, ಉಕ್ಕಿನ ಚೂರಿ ಮುಂತಾದ ಸಾಮಗ್ರಿಗಳನ್ನು ತಯಾರಿಸಿಕೊಟ್ಟನು. ದಾರಿಯಲ್ಲಿ ದೇವಲನ ಬಳಿಯಿದ್ದ ಹತ್ತಿ ಬೀಜಗಳು ಕೆಳಗೆ ಬೀಳಲು ಅವನ್ನು ಒಂದು ಹುಂಜ ನುಂಗಿತು. ಬೀಜಗಳನ್ನು' ಹಿಂದಿರುಗಿಸಿದರೆ ನೇಯ್ಗೆಯ ಅಗಲಕ್ಕೆ ಹುಂಜವೆಂದು ಹೆಸರಿಡುವನೆಂದನು. ದೇವಾಂಗ, ಹತ್ತಿ, ಬೀಜಗಳನ್ನು ಬಿತ್ತಿದಾಗ ಶಿವನ ಕೃಪೆಯಿಂದ ಬೆಳೆದ ಗಿಡಗಳಲ್ಲಿ ಬಿಟ್ಟ ಹತ್ತಿಕಾಯಿಗಳಿಂದ ಹತ್ತಿಯನ್ನು ಬಿಡಿಸಿ, ವಿಂಗಡಿಸಿ, ನೂಲನ್ನು ತಯಾರಿಸಿ ನೇಯ್ದ ಬಟ್ಟೆ ಅಕ್ಷಯವಾಗುವಂತಹ ಕಂಕಣವನ್ನು ಚೌಡೇಶ್ವರಿಯಿಂದ ವರವಾಗಿ ಪಡೆದು, ಶುಭ ಮುಹೂರ್ತದಲ್ಲಿ ವಸ್ತ್ರಗಳನ್ನು ನೇಯಲು ಆರಂಭಿಸಿದನು.

**ವಸ್ತ್ರ ಪ್ರದಾನ:** ಚಿತ್ರ ವಿಚಿತ್ರವಾದ ಬಣ್ಣಬಣ್ಣಗಳ ವಸ್ತ್ರಗಳನ್ನು ದೇವಾಂಗ ನೇಯ್ದು, ವಿಷ್ಣುವಿಗೆ ರಮ್ಯ ಪೀತಾಂಬರ, ಲಕ್ಷ್ಮಿಗೆ ಶುಭ್ರಾಂಬರ, ಭೂದೇವಿಗೆ ರಕ್ತಾಂಬರ, ಅಲ್ಲಿದ್ದ ಸಮಸ್ತರಿಗೂ ಅವರಿಗೆ ಬೇಕಾದ ವಸ್ತ್ರಗಳನ್ನೂ ಕೊಟ್ಟು ಸಂತಸಗೊಳಿಸಿದನು. ಆಮೇಲೆ ದೇವಾಂಗ ಸತ್ಯ ಲೋಕಕ್ಕೆ ಹೋಗಿ ಬ್ರಹ್ಮನಿಗೆ ಕೆಂಪು, ದುಕೂಲ, ಸರಸ್ವತಿಗೆ ಧವಳಾಂಬರ, ಸಾವಿತ್ರಿಗೆ ಹಳದಿ ವಸ್ತ್ರ, ಗಾಯತ್ರಿಗೆ ರಕ್ತ ವಸ್ತ್ರಗಳನ್ನೂ ಕೊಟ್ಟನು. ವಿಷ್ಣುವಿನ ಹೊಕ್ಕುಳಲ್ಲಿರುವ ಮಾನಿ ಅಭಿಮಾನಿ ಎಂಬೀರ್ವರು ಸ್ತ್ರೀಯರು ಭೂಲೋಕದಲ್ಲಿ ಹತ್ತಿಯ ಗಿಡಗಳಾಗಿ ಹುಟ್ಟಿ ಅಧಿಕ ಹತ್ತಿ ಬೆಳೆ ನೀಡುವರೆಂದು ಬ್ರಹ್ಮನಿಂದ ಅರಿತನು. ಆಮೇಲೆ, ಮೇರು, ಸಹ್ಯಾದ್ರಿ, ವಿಂಧ್ಯ, ಪರ್ವತಗಳಲ್ಲೂ, ಸ್ವರ್ಗದಲ್ಲೂ ಸಕಲರಿಗೂ, ಮಯನಿಗೂ ನವಗ್ರಹ ದೇವತೆಗಳಿಗೂ ಉಚಿತ ವಸ್ತ್ರಗಳನ್ನೂ ಕೊಟ್ಟನು. ಪಾತಾಳ ಲೋಕಕ್ಕೆ ತೆರಳಿ, ವಾಸುಕಿ, ತಕ್ಷಕ, ಚಿತ್ರಸೇನರಿಗೂ ಆದಿಶೇಷನಿಗೂ ನಾಗಗಳಿಗೂ ವಸ್ತ್ರಗಳನ್ನಿತ್ತನು. ಇದರಿಂದ ಸಂತುಷ್ಟನಾದ ಆದಿಶೇಷ ನಿಂದ ಅವನ ಮಗಳು ಚಂದ್ರರೇಖೆಯನ್ನು ದೇವಾಂಗ ಸ್ವೀಕರಿಸಿದನು. ಭೂಲೋಕ ದಲ್ಲಿ ರಾಜ ಮಹಾರಾಜರಿಗೂ ಪ್ರಜೆಗಳಿಗೂ, ಎಲ್ಲರಿಗೂ ವಸ್ತ್ರಗಳನಿತ್ತನು. ಈ ರೀತಿ ಮೂರು ಲೋಕಗಳಲ್ಲೂ ಎಲ್ಲರಿಗು ವಸ್ತ್ರಗಳನ್ನು ಕೊಟ್ಟು ಹೆಸರಾದನು.

ಶಿವನನ್ನು ಕಾಣಲು ಕೈಲಾಸವನ್ನು ಹೊಕ್ಕು ಮಹಾದೇವನನ್ನು ಸ್ತುತಿಸಿ, ಬಟ್ಟೆ ನೇಯ್ದು ಉಳಿದ ದಾರಗಳನ್ನು ಏನು ಮಾಡಬೇಕೆಂದು ಕೇಳಿದಾಗ ವೇದಮಾತೆಯಾದ ಗಾಯತ್ರಿಯನ್ನು ಪ್ರಣವದಿಂದ ಸಮಗೊಳಿಸಿ ಉಪವೀತವನ್ನೂ ಮಂಗಳ ಸೂತ್ರವನ್ನೂ ತಯಾರಿಸಲು ಪರಮಾತ್ಮ ಹೇಳಿದನು. ಅದರಂತೆ ಯಜ್ಞೋಪವೀತ ತಯಾರಿಸಿ, ಒಂದು

ಸೂತ್ರ ಬ್ರಹ್ಮಚಾರಿಗೆ, ಎರಡು ಸೂತ್ರ ಮದುವೆಯಾದವನಿಗೆ ಕೊಟ್ಟನು. ಬ್ರಹ್ಮ, ವಿಷ್ಣು, ಶಿವ, ಋಷಿಗಳೇ ಮುಂತಾದವರೆಲ್ಲರಿಗು ಗಾಯತ್ರಿ ರೂಪದ ಯಜ್ಞೋಪವೀತ ಕೊಟ್ಟು, ಬ್ರಾಹ್ಮಣ ಶ್ರೇಷ್ಠರಿಗಿಂತಲೂ ದೇವಾಂಗ ಎಂದಿಗೂ ಉತ್ತಮ ಎನಿಸಿಕೊಂಡನು. ಶೀವ, ಪಾರ್ವತಿ, ಗಜಾಸ್ಯರಿಗೂ ವಸ್ತ್ರಗಳನ್ನು ಕೊಟ್ಟನು. ದೇವಾಂಗನಿಗೆ ಮಹದೇವ ಪರಶು ಆಯುಧವನ್ನೂ ಶತ್ರು ನಾಶಕ್ಕೆ ನಂದಿ ಧ್ವಜವನ್ನೂ ದಯಪಾಲಿಸಿದನು. ಶಿವನ ಅಪ್ಪಣೆಯಂತೆ ಸೂರ್ಯ ತನ್ನ ತಂಗ ಇ ದೇವದತ್ತೆಯನ್ನು ಕೊಟ್ಟು ವೈಭವದಿಂದ ಮದುವೆ ಮಾಡಿದನು.

ಕೈಲಾಸದಿಂದ ಆಮೋದ ಪಟ್ಟಣಕ್ಕೆ ಬರುವ ದಾರಿಯಲ್ಲಿ, ದೇವಲೋಕದ ಅಪ್ಸರ ಕನ್ಯೆ ವಿಮೋಹಿನಿ ರಂಭೆ ಇವನ ರೂಪು ಲಾವಣ್ಯಗಳಿಗೆ ಬೆರಗಾಗಿ ತನ್ನಲ್ಲಿ ಸುರತ ಕ್ರೀಡೆ ಅನುಭವಿಸುವಂತೆ ಬೇಡಿದಳು. ಅವಳ ಕೋರಿಕೆಯನ್ನು ತಿರಸ್ಕರಿಸಿದ ದೇವಾಂಗನಿಗೆ, “ನೀನೂ ನಿನ್ನ ವಂಶಜರೂ ೫,೦೦೦ ವರುಷಗಳು ಶೂದ್ರತನ ಹೊಂದುವಿರಿ. ಆಮೇಲೆ ಬ್ರಹ್ಮನ ವರವಾಗುವುದೆಂದು ಶಾಪ ಕೊಟ್ಟಳು.”

ದೇವದತ್ತೆಯೊಡನೆ ದೇವಾಂಗ ರಾಜರ್ಷಿ ಅನೇಕ ವರುಷಗಳು ಸುಭಿಕ್ಷದಿಂದ ರಾಜ್ಯಪಾಲನೆ ಮಾಡಿದನು. ದೇವದತ್ತೆಯ ಹೊಟ್ಟೆಯಲ್ಲಿ ದಿವ್ಯಾಂಗ, ವಿಮಲಾಂಗ, ಧವಳಾಂಗ ಎಂಬ ಮೂವರು ಮಕ್ಕಳೂ, ಚಂದ್ರರೇಖೆಯಲ್ಲಿ ಸುಧರ್ಮನೆಂಬ ಮಗನೂ ಜನಿಸಿದರು. ದಂಡೆತ್ತಿ ಬಂದ ಕರೂಶ ರಾಜ ಶೂರಸೇನನನ್ನು ಕೊಂದು ತನ್ನ ಮಗ ಸುಧರ್ಮನನ್ನು ಆ ದೇಶಕ್ಕೆ ರಾಜನಾಗಿ ಪಟ್ಟ ಕಟ್ಟಿದನು.

ಲೋಕದಲ್ಲಿ ಎಲ್ಲರಿಗೂ ಬಟ್ಟೆಗಳನ್ನು ದೇವಾಂಗ ಕೊಟ್ಟರೂ ತಮಗಿಲ್ಲವೆಂದು ಅಸೂಯೆಯಿಂದ ದೇವತೆಗಳನ್ನು ಕೊಲ್ಲಬೇಕೆಂದು ವ್ಯಾಘ್ರವಕ್ತ್ರ ದೈತ್ಯರೊಂದಿಗೆ ಮೇಲೆ ಬಿದ್ದನು. ದೇವತೆಗಳು ನಿಸ್ಸಹಾಯಕರಾಗಿ ಶಿವನನ್ನು ಪ್ರಾರ್ಥಿಸಿದ್ದರಿಂದ ದೇವಾಂಗನನ್ನು ಯುದ್ಧಕ್ಕೆ ನೇಮಿಸಿದನು. ವ್ಯಾಘ್ರವಕ್ತ್ರನನ್ನು ಕೊಂದನು. ಆಗ ದೇವಾಂಗ ರಾಜನ ಮೇಲೆ ಯುದ್ಧ ಮಾಡುತ್ತ, ಹೇಮಕೂಟ ಶೃಂಗವನ್ನು ಮೇಲೆಸೆದರೂ ಏನೂ ಆಗಲಿಲ್ಲ. ಮಾಯೆಯಿಂದ ಎಲ್ಲರನ್ನೂ ಪೀಡಿಸಿದನು. ನಂದಿ ಧ್ವಜವನ್ನು ದೈತ್ಯರಲ್ಲಿ ಹಾಕಿದಾಗ ಗೂಳಿಗಳು ದೈತ್ಯರನ್ನು ಸದೆ ಬಡಿದುವು. ವಜ್ರದಂಷ್ಟ್ರನ ಪ್ರೇರಣೆಯಂತೆ ವಿದ್ಯುತ್ಕೇಶ ತಾನು ಇಂದ್ರನ ದೂತನೆಂದು ಮೋಸಮಾಡಿ ನಂದಿ ಧ್ವಜವನ್ನು ಅಪಹರಿಸಿ ತಂದನು. ಇದನ್ನು ಪ್ರಯೋಗಿಸಿ ದೇವಾಂಗನನ್ನು ವೀರ ಮಾಹೇಂದ್ರ ಪಟ್ಟಣಕ್ಕೆ ಕರೆತಂದು ತನ್ನ ಮಗಳು ಪದ್ಮಿನಿಯನ್ನು ಕೊಟ್ಟು ಮದುವೆ ಮಾಡಿದನು. ಅವಳಿಂದ ಶಾಲ, ಹಲ, ಬಲ, ಮಕ್ಕಳಾದರು. ಇವರಿಗೆ ನೇಯ್ಗೆ ಕಲಿಸಿ ರಾಕ್ಷಸರಿಗೆ ಬಟ್ಟೆಗಳನ್ನು ಕೊಡಿಸಿದನು. ನಂದಿ ಧ್ವಜವನ್ನು ತೆಗೆದುಕೊಂಡು ದೇವಾಂಗ ಹಿಂದಿರುಗಿದನು.

ದೇವಾಂಗ ರಾಜ ಒಂದು ದಿನ ಶಿವನ ದರ್ಶನ ಪಡೆದಾಗ, ನಂದಿ ಧ್ವಜವನ್ನು ಅಸುರರ ಪಾಲು ಮಾಡಿ ದೇವತೆಗಳನ್ನು ಬಾಧೆ ಪಡಿಸಿದ್ದರಿಂದ, ನೀನು ವಿದ್ಯಾಧರ, ಪುಷ್ಪದಂತ, ಬೇತಾಳ ವರರುಚಿ, ಚಿತ್ರ ಯೋಗಿ, ದೇವಶಾಲಿ, ದೇವದಾಸ ಎಂಬ ಏಳು ಅವತಾರಗಳಲ್ಲಿ ಭೂಲೋಕದಲ್ಲಿ ಹುಟ್ಟೆಂದು ದೇವಾಂಗನಿಗೆ ಶಂಕರ ಶಪಿಸಿದನು. ಶಾಪಗ್ರಸ್ತರನಾದ ದೇವಾಂಗ ಅಮೋದ ಪುರಕ್ಕೆ ಬಂದನು. ದೇವಾಂಗ ರಾಜನ ದೇಹ ಲಿಂಗವಾಗಿ, ರಾಮಲಿಂಗೇಶ್ವರವೆಂದು

ಹೆಸರಾಯಿತು. ದೇವಾಂಗ ಪುತ್ರ ದಿವ್ಯಾಂಗ ರಾಮಲಿಂಗೇಶ್ವರನನ್ನು ಪೂಜಿಸುತ್ತ ರಾಜ್ಯ ಪಾಲಿಸುತ್ತಿದ್ದನು. ದೇವಾಂಗ ಜನಾಂಗದವರೆಲ್ಲರ ಭಕ್ತಿ ಪಾತ್ರ, ಪೂಜನೀಯ ಕುಲದೇವತೆ ಈ ರಾಮಲಿಂಗ.

**ಮೂಲ ಪುರುಷ ದೇವಾಂಗನನ್ನು ಕುರಿತು ಒಂದು ಪೌರಾಣಿಕ ಕಥೆ**

ನೇಕಾರಿಕೆ ಒಂದು ವೃತ್ತಿ. ವೃತ್ತಿ ಗುಂಪುಗಳೇ ಭಾರತದಲ್ಲಿ ಜಾತಿಯಾಗಿರುವದು ಇಲ್ಲಿಯ ವೈಶಿಷ್ಠತೆ. ಭಾರತದ ಜಾತಿ ಗುಂಪುಗಳು ಮೇಲ್ಮುಖ ಚಲನೆ ಹಾಗೂ ಸಮಾಂತರ ಸಂಘಟನೆಯ ಗುಣ ಹೊಂದಿ ರೂಪಾಂತರವಾಗತೊಡಗಿವೆ. ನೇಕಾರಿಕೆ ವೃತ್ತಿಯಲ್ಲಿ ದೇವಾಂಗ ಸಹೋದ್ಯೋಗಿ ಜಾತಿ ಗುಂಪುಗಳು ಸಾಕಷ್ಟಿವೆ. ನೂಲುವವರಿಂದ ಹಿಡಿದು ನೇಯ್ಯುವವರವರೆಗಿನ ವೃತ್ತಿ ಸಮೂಹಗಳು ನೇಕಾರ ಜಾತಿಯಲ್ಲಿಯೆ ಒಳಪಂಗಡ ರೂಪಿಸಿಕೊಂಡಿವೆ. ಇವುಗಳ ಸಮಾಜಶಾಸ್ತ್ರೀಯ ವಿಶ್ಲೇಷಣೆಗೆ ಒಂದು ಸಣ್ಣ ಟಿಪ್ಪಣಿ ಕೊಡಲಾಗಿದೆ.

ಅಖಿಲ ಕರ್ನಾಟಕ ದೇವಾಮಗ ಸಮ್ಮೇಳನದ ಸ್ಮರಣ ಸಂಚಿಕೆ (೧೯೭೨) ಯಲ್ಲಿ ರ. ಪುಟ್ಟರಾಜರವರು ಬರೆದ 'ದೇವಾಂಗನ ಏಳು ಅವತಾರ' ಪುರಾಣ ಕತೆಯ ಮೊದಲ ಭಾಗವನ್ನು ಏನೂ ಬದಲಾವಣೆ ಮಾಡಲಾರದೆ ಮೇಲೆ ಕೊಡಲಾಗಿದೆ. ಸ್ವಕುಳಸಾಳಿ ಜಾತಿಯ ದೇವರದ ಜಿಹ್ವೇಶ್ವರನಿಗೂ ಇದೇ ರೀತಿಯ ಪುರಾಣ ಕತೆಯಿದೆ. ಒಂದು ಬದಲಾವಣೆ ಎಂದರೆ ದೇವಾಂಗ ಶಿವನ ಕಣ್ಣಿನಿಂದ ಜನಿಸಿದರೆದ, ಜಿಹ್ವೇಶ್ವರ ಶಿವನ ನಾಲಿಗೆಯಿಂದ ಜನಿಸಿದ್ದಾನೆ.

ಪುರಾಣಗಳು ಆಧುನಿಕರ ಅವಜ್ಞೆಗೆ ಒಳಗಾದರೂ, ಇವು 'ಸಂಕೀರ್ಣವಾದ ಸಾಂಸ್ಕೃತಿಕ ವಾಸ್ತವಗಳಾಗಿವೆ'. ಭಾರತದ ಬಹುತೇಕ ಜಾತಿ ಗುಂಪುಗಳು ತಮ್ಮ ಮೂಲದ ಬಗ್ಗೆ ಪುರಾಣ ಕತೆಗಳನ್ನು ಸೃಷ್ಟಿಸಿಕೊಂಡಿವೆ. ಬ್ರಾಹ್ಮಣೇತರ ಜಾತಿಗಳು ತಮ್ಮ ಇತಿಹಾಸವನ್ನು ಪುನರ್ ಸೃಷ್ಟಿಸುವ ಮೂಲಕ ವೈದಿಕರ ಚಿಪ್ಪಿನೊಳಗೆ ಸೇರುವ ಯತ್ನ ಮಾಡುತ್ತಲೇ ತಮ್ಮ ಸಾಮಾಜಿಕ ಅಂತಸ್ತು ಹೆಚ್ಚಿಸಿಕೊಳ್ಳುವ ಕ್ರಿಯೆಗೂ ಕೈ ಹಾಕಿವೆ. ಇದರಿಂದ ಜಾತಿ ಗುಂಪಿನಲ್ಲಿ ದ್ವಂದ್ವ ಪ್ರಾರಂಭವಾಗುತ್ತವೆ. ಶ್ರೇಷ್ಠತೆಯ ಕಿರೀಟ ಧರಿಸುವ ಮಹತ್ವಾಕಾಂಕ್ಷೆ ಒಂದು ಕಡೆಗೆ, ಸಂವಿಧಾನದತ್ತ ಹಿಂದುಳಿದವರಿಗಿರುವ ಸೌಲಭ್ಯ ಪಡೆಯುವ ಆಸೆ ಮತ್ತೊಂದು ಕಡೆಗೆ. ಇದಕ್ಕಾಗಿ ಜಾತಿ ಸಂಘಟನೆ ಹೊಂದುವದು ಅನಿವಾರ್ಯವಾಗುತ್ತದೆ. ಈ ಸಂಘಟನೆ ಪ್ರಭುತ್ವ ಪಡೆಯಲು ಪ್ರಚೋದನೆ ನೀಡುತ್ತದೆ. ಪ್ರಬಲ ಜಾತಿ ಇಲ್ಲಿ ಮೇಲುಗೈ ಸಾಧಿಸಿ ಬಿಡುತ್ತದೆ. ಪ್ರಭುತ್ವ ಹಾಗೂ ಜಾತಿಯ ನಡುವೆ ಅನೈತಿಕ ಸಂಬಂಧ ನಡೆಯುತ್ತವೆ.

ನೇಕಾರ ಜಾತಿಯಂತಹ ಹಿಂದುಳಿದ ಗುಂಪುಗಳು ಸಂಸ್ಕೃತೀಕರಣಗೊಳ್ಳಲು ತವಕಿಸುತ್ತಿವೆ. ಇದು ಈ ಜಾತಿ ಗುಂಪುಗಳಿಗೆ ಶಾಪವಾಗಬಹುದು. ಶ್ರೀಮಂತ ನೇಕಾರರು ಜಾತಿಯ ಶ್ರೇಣಿಯಲ್ಲಿ ಮೇಲೆ ಏರುವ ತವಕ ತೋರಿಸಿದರೆ ಬಡ ನೇಕಾರ ಸರಕಾರಿ ಸೌಲಭ್ಯ ಪಡೆಯಲು ತವಕಿಸಬಹುದು. ಇದರಿಂದ ಒಂದು ಜಾತಿ ಗುಂಪಿನಲ್ಲಿ Centrifugal ಹಾಗೂ Centri Petal ಶಕ್ತಿಗಳು ಕಾರ್ಯ ನಿರ್ವಹಿಸುತ್ತವೆ.

**ಇಳಕಲ್ಲ ಅಂದು-ಇಂದು**

ಈ ಶತಮಾನದ ಕೊನೆಯಲ್ಲಿ ಇಳಕಲ್ಲ ಪರಂಪರೆಯ ಚಿತ್ರಣವನ್ನು ಕೇವಲ ನೇಕಾರಿಕೆ ದೃಷ್ಟಿಕೋನದಿಂದಲ್ಲದೆ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ದಾಖಲಿಸುವುದು ಕಾಲದ ಅಗತ್ಯವಾಗಿದೆ. ಏಕೆಂದರೆ ಇಲ್ಲಿಯ ಸೀರೆಯ ಉದ್ಯಮದ ಮೇಲೆ ಈ ಎಲ್ಲ ಬಹುಮುಖಿ ಅಂಶಗಳು ಪ್ರಭಾವ ಬೀರಿವೆ.

ಹುನಗುಂದ ತಾಲೂಕಿನ ಇಳಕಲ್ಲ ಪಟ್ಟಣ ಒಂದು ಕಾಲಕ್ಕೆ ಪಡಮೂಲೆ ಸ್ಥಳವಾಗಿತ್ತು. ಮುಂಬೈ ಕರ್ನಾಟಕ ಹಾಗೂ ಹೈದರಾಬಾದ ಕರ್ನಾಟಕದ ಮಿಶ್ರ ಭಾಷೆ ಹಾಗೂ ಸಂಸ್ಕೃತಿಯನ್ನು ಪಳೆಯುಳಿಕೆ ರೂಪದಲ್ಲಿ ಇಂದಿಗೂ ಇಲ್ಲಿ ಕಾಣಬಹುದು. ೧೯೯೯ ರಲ್ಲಿ ಜಿಲ್ಲೆಗಳ ಪುನರ್ ವಿಂಗಡಣೆ ಆದ ನಂತರ ವಿಜಾಪುರದಿಂದ ಹೊಸ ಜಿಲ್ಲೆ ಬಾಗಲಕೋಟೆಗೆ ಆಡಳಿತಾತ್ಮಕವಾಗಿ ಇದು ವರ್ಗಾಯಿಸಲ್ಪಟ್ಟಿದೆ. ಗದಗ, ಕೊಪ್ಪಳ, ರಾಯಚೂರ ಜಿಲ್ಲೆಗಳ ಗಡಿಗಳಿಂದ ಇದು ಆವೃತ್ತವಾಗಿದೆ. ಸರಾಸರಿ ೧೫' ವಾರ್ಷಿಕ ಮಳೆ ಪಡೆಯುವ ಬಯಲು ಪ್ರದೇಶದ ಈ ಪಟ್ಟಣ ಉಷ್ಣ ಹವಾಮಾನ ಹೊಂದಿದೆ. ಪ್ರಾಚಿನ ನಾಗರಿಕತೆಗಳು ಹಳ್ಳ, ತೊರೆ, ನದಿ ದಂಡೆಯ ಮೇಲೆ ವಿಕಾಸವಾದಂತೆ ಇಳಕಲ್ಲ ಪಟ್ಟಣದ ಬಹುಭಾಗ ಹಿರೇಹಳ್ಳ ಹಾಗೂ ಸುಡಗಾಡಿಹಳ್ಳಗಳಿಂದ ಸುತ್ತು ವರಿದಿದೆ. ಈ ಹಳ್ಳದ ನೀರು ಒಂದು ಕಾಲಕ್ಕೆ ನೇಕಾರಿಕೆ ಉದ್ಯಮದ ಜೀವ ಸೆಲೆಯಾಗಿತ್ತು. ೧೯೭೮ ರಲ್ಲಿಯೇ ಶತಮಾನೋತ್ಸವ ಆಚರಿಸಿಕೊಂಡ ನಗರಸಭೆ ಈ ಪಟ್ಟಣಕ್ಕಿದೆ.

ಇಳಕಲ್ಲ ಹಾಗೂ ಇಲಕಲ್ಲ ಎಂಬ ಎರಡೂ ಹೆಸರುಗಳು ಈ ಪಟ್ಟಣಕ್ಕೆ ಪ್ರಚಲಿತವಾಗಿ ಬಳಕೆಯಲ್ಲಿವೆ. ಹೆಸರಿನ ನಿಷ್ಪತ್ತಿಯ ಬಗ್ಗೆ ಯಾವುದೆ ಐತಿಹಾಸಿಕ ಖಚಿತ ದಾಖಲೆಗಳು ಇಲ್ಲ. ಭೌಗೋಳಿಕ ಸಂದರ್ಭದ ಹಿನ್ನೆಲೆಯಲ್ಲಿ ಮಾತ್ರ ಇಳಕಲ್ಲ ಹೆಸರನ್ನು ಅರ್ಥೈಸಬಹುದು. ಈ ಪಟ್ಟಣದ ಸುತ್ತಲು ಎತ್ತರದ ದಿಣ್ಣೆಯ ಪ್ರದೇಶ ಇದೆ. ಈ ದಿಣ್ಣೆಯ ಇಳಿಜಾರಿನಲ್ಲಿ ಈ ಪಟ್ಟಣ ಇರುವುದರಿಂದ ಇಳಕಲ ಶಬ್ದವೆ 'ಇಳಕಲ್ಲ' 'ಇಲಕಲ್ಲ' ಆಗಿ ಪ್ರಚಲಿತ ಇರಬಹುದು.

ಇತಿಹಾಸದ ಜಾಡು ಹಿಡಿದು ಈ ಪ್ರದೇಶ ವರ್ಣಿಸಲು ಯಾವುದೇ ಪ್ರಾಚೀನ, ಶಾಸನ, ಸ್ಮಾರಕಗಳು ಇಲ್ಲಿ ಲಭ್ಯವಾಗಿಲ್ಲ. ಇತಿಹಾಸ ಎಂದರೆ ಕೇವಲ ದೊರೆಗಳ ಅಥವಾ ರಾಜರಾಣಿಯರ ವರ್ಣನೆ ಆಗಿರುವುದರಿಂದ ಜನಮುಖಿಯಾದ ಇತಿಹಾಸ ಈಗ ಬರೆಯಬೇಕಾಗಿದೆ. ಈ ಊರಿನಲ್ಲಿ ಕಿಲ್ಲಾ ಎಂಬ ಭಾಗವಿದೆ. ಅದನ್ನೇ ಹಳೆ ಇಳಕಲ್ಲ ಎಂದು ಕರೆಯುತ್ತಾರೆ. ಅಲ್ಲಿ ವಾಸಿಸುವವರು ಕೇವಲ ಲಿಂಗಾಯತರು. ಅವರೆಲ್ಲ ಕೃಷಿಕರು. ಅಲ್ಲಿ ಈಶ್ವರ, ಮಲ್ಲಿಕಾರ್ಜುನ ಹಾಗೂ ಮಾರುತಿ ದೇವಾಲಯಗಳಿವೆ. ಈ ಕಿಲ್ಲಾ ಭಾಗದ ಹೊರಗೆ ನೇಕಾರಿಕೆ ಅವಲಂಬಿಸಿದ ಸಮುದಾಯಗಳು ವಾಸಿಸುತ್ತವೆ. ಆದ್ದರಿಂದ ನೇಕಾರಿಕೆ ಇಲ್ಲಿ ವಲಸಿಗರಿಂದ ಪ್ರಾರಂಭವಾಗಿರಬಹುದು ಎಂದು ಊಹಿಸಬಹುದು.

ಇಳಕಲ್ಲಿನಿಂದ ಐದಾರು ಕಿಲೋಮೀಟರ ದಕ್ಷಿಣಕ್ಕೆ ಬಲಕುಂದಿ ಗ್ರಾಮ ಇದೆ. ಅಲ್ಲಿ ಕೋಟೆಗೋಡೆ, ಹುಡೆಗಳಿವೆ. ಅದೊಂದು ಜಹಗೀರ ಗ್ರಾಮ ಎಂದು ಹೇಳುತ್ತಾರೆ. ವಿಜಯನಗರ ಸಾಮ್ರಾಜ್ಯ ಹಾಗೂ ಬಹಮನಿ ಸಾಮ್ರಾಜ್ಯಗಳ

ನಡುವೆ ಕೃಷ್ಣೆಯ ತಟಾಕದಲ್ಲಿ ಜರುಗಿದ ರಕ್ಕಸಗಿ, ತಂಗಡಗಿ ಕಾಳಗ ಈ ಪ್ರದೇಶದಿಂದ ಸುಮರು ೨೫ ಕಿ.ಮೀ. ಅಂತರದಲ್ಲಿದೆ. ಆದ್ದರಿಂದ ಸುತ್ತಲಿನ ಸಾಮ್ರಾಜ್ಯಗಳ ಏರಿಳಿತ ಹಾಗೂ ಬದಲಾವಣೆಗಳ ಭಾಗವಾಗಿ ಈ ಪ್ರದೇಶ ಉಳಿದಿತ್ತು ಎಂದು ಮಾತ್ರ ಹೇಳಬಹುದು. ಚಾಲುಕ್ಯ, ರಟ್ಟ, ಬಹಮನಿ, ವಿಜಯನಗರ, ಮೊಘಲ, ಮರಾಠ, ಪೇಶ್ವೆ ಹಾಗೂ ಬ್ರಿಟಿಷ್ ಆಡಳಿತದ ನೆರಳಾಗಿ ಈ ಪ್ರದೇಶ ಉಳಿದಿರಬಹುದು. ಧಾರವಾಡ, ಬೆಳಗಾಂವಿ, ಕಲಾದಗಿ, ವಿಜಾಪುರ ಹಾಗೂ ಬಾಗಲಕೋಟ ಜಿಲ್ಲೆಗಳ ಆಡಳಿತಕ್ಕೆ ಒಳಪಟ್ಟ ಈ ಪಟ್ಟಣ ಯಾವಾಗಲೂ ಹುನಗುಂದ ತಾಲೂಕಿನಲ್ಲಿಯೇ ಇದೆ. ಇಲ್ಲಿ ಹೇಳಿಕೊಳ್ಳಬಹುದಾದ ಹಳೆಯ ಸ್ಮಾರಕಗಳೆಂದರೆ ಬಸವತತ್ವ ಪರಂಪರೆಯ ವಿಜಯ ಮಹಾಂತೇಶ್ವರ ಮಠ ಹಾಗೂ ಔಲಿಯ ಪರಂಪರೆಯ ಮರ್ತುಜ ಖಾದ್ರಿ ದರ್ಗಾ. ದರ್ಗಾ ಕೂಡ ಹಿಂದೂ ಮುಸ್ಲಿಂರ ಭಾವೈಕ್ಯತೆಯ ಸಂಕೇತವಾಗಿದೆ.

ಪಡಮೂಲೆ ಸ್ಥಳವಾಗಿದ್ದ ಇಳಕಲ್ಲ ಸುಮಾರು ೪೦ ವರ್ಷಗಳ ಹಿಂದೆ ಅತಿವೃಷ್ಟಿಯಾದಾಗ ದ್ವೀಪವಾಗಿ ನರಳಿದ ಪ್ರಸಂಗ ಮರೆಯುವಮತಿಲ್ಲ. ಕಮತಗಿ ಬಳಿ ಮಲಪ್ರಭೆ, ಧನ್ನೂರ ಬಳಿ ಕೃಷ್ಣೆ ಹಾಗೂ ಇಳಕಲ್ಲ ಸುತ್ತಲು ಇರುವ ಹಳ್ಳಗಳಿಗೆ ಸೇತುವೆಗಳು ನಿರ್ಮಾಣವಾಗುವ ಪೂರ್ವದಲ್ಲಿ ಈ ಪಟ್ಟಣ ಹೊರಜಗತ್ತಿನ ಸಂಪರ್ಕವನ್ನೇ ಒಮ್ಮೊಮ್ಮೆ ಕಳೆದುಕೊಳ್ಳುತ್ತಿತ್ತು. ಈ ಊರಿಗೆ ಮೊದಲು ಸಾರ್ವಜನಿಕ ಸಂಪರ್ಕ ಒದಗಿಸಿದ ಕೀರ್ತಿ ಹರವಿ ಹಾಗೂ ರಂಗರೇಜ್ ಬಂಧುಗಳಿಗೆ ಸಲ್ಲುತ್ತದೆ. ಹರವಿಯವರ ಗಾಡಿಯ ಕುಬೇರಪ್ಪ, ರಂಗರೇಜ್ ಗಾಡಿಯ ಈರಪ್ಪ ಎಂಬ ಚಾಲಕರ ಹೆಸರಿನಿಂದಲೆ ಈ ಮೋಟರಗಳು ಗುರುತಿಸಲ್ಪಡುತ್ತಿದ್ದವು. ಆದರೆ ಮಾಲಿಕರ ಹೆಸರಿನಿಂದಲ್ಲ. ಈ ಪಟ್ಟಣವನ್ನು ಆಧುನೀಕರಣಗೊಳಿಸಿದ ಕೀರ್ತಿ ಕಂಠಿ, ನಾಡಗೌಡ ಹಾಗೂ ಕಡಪಟ್ಟಿ ಯವರಿಗೆ ಸಲ್ಲುತ್ತದೆ.

ಇಳಕಲ್ಲ ಪಟ್ಟಣದ ಪರಂಪರೆಯೇ ವಿಶಿಷ್ಟವಾದದ್ದು. ಐದು ದಶಕಗಳ ಹಿಂದೆ ನಾರು, ಕ್ಷಯ, ಕುಷ್ಠರೋಗ ಇಲ್ಲಿ ಸಾಮಾನ್ಯವಾಗಿದ್ದವು. ಬೆಲ್ಲದ ಸಾದಾ ಚಹಾ, ಚೂರಮರಿ ಸೂಸಲ, ಮಿರ್ಚಿ, ಶಿಕಾರಿ ಚುಟ್ಟ ಇಲ್ಲಿಯ ಬಡ ನೇಕಾರನ ಜೀವನ ಶೈಲಿಯ ಸಂಕೇತಗಳಾಗಿದ್ದವು. ಎಲ್ಲರ ಮಾನ ಕಾಯಲು ಬಟ್ಟೆ ಉತ್ಪಾದಿಸುವ ನೇಕಾರನು ಒಂಟಿ ಧೋತರದಲ್ಲಿ ಹಿರೇ ಹಳ್ಳದಲ್ಲಿ ಸ್ನಾನ ಮಾಡಿ, ಅದನ್ನೇ ಒಗೆದು, ಒಣಗಿಸಿ ಮತ್ತೆ ಉಟ್ಟು ಹಳ್ಳದ ದಂಡೆಗಿರುವ ಮಹಾಂತ ಗದ್ದುಗೆಗೆ ಕೈ ಮುಗಿದು, ಬೆನ್ನು ಸೇರಿದ ಹೊಟ್ಟೆಗೆ ಅರೆ ಬರೆ ಉಂಡು, ತನ್ನ ನೇಕಾರಿಕೆ ವೃತ್ತಿಯಲ್ಲಿ ತೊಡಗುವ ಕಾಯಕ ಜೀವಿಯಾಗಿದ್ದ. ನೇಕಾರನ ಹೆಂಡತಿ ಬತ್ತಲೆ ಎಂಬಂತೆ, 'ಧನಿ' ಸಂಸ್ಕೃತಿಗೆ ನಲುಗಿ ನರಪೇತಲನಾಗಿದ್ದ. ಈ ಏಕತಾನ ಕಷ್ಟದ ಜೀವನದಲ್ಲಿಯೇ ಕಲೆ, ಸಂಗೀತ, ನಾಟಕಗಳತ್ತ ವಾಲಿದ ಪರಂಪರೆ ಇಲ್ಲಿದೆ.

ವೃತ್ತಿ ರಂಗಭೂಮಿ ಇಲ್ಲಿ ಜೀವಂತಿಕೆ ಪಡೆದಿತ್ತು. ಕಂಪನಿ ನಾಟಕಗಳಿಗೆ ಇಲ್ಲಿ ನಿರಂತರ ಆಶ್ರಯ ಇತ್ತು. ವೃತ್ತಿ ರಂಗಭೂಮಿಗೆ ಬೇಕಾಗುವ ಪರದೆ ಹಾಗೂ ಇತರ ಸಾಧನಗಳನ್ನು ರಚಿಸುವ ಕಲಾಕಾರರ ತಂಡವೇ ಇಲ್ಲಿತ್ತು. ನಾಡಿಗೆ ಖ್ಯಾತ ಕಲಾವಿದರನ್ನು ನೀಡಿದ ಕೀರ್ತಿ ಈ ಊರಿಗೆ ಸಲ್ಲುತ್ತದೆ. ಎಲ್ಲಿಯೋ ದಿವಾಳಿ ತೆಗೆದ ವೃತ್ತಿ ನಾಟಕ ಕಂಪನಿಗಳು ಇಲ್ಲಿ ಮರುಜನ್ಮ ಪಡೆದ ಇತಿಹಾಸ ಇದೆ. ಹವ್ಯಾಸಿ ಹಾಗೂ ವೃತ್ತಿ ರಂಗ ಭೂಮಿಯಲ್ಲಿ ಸ್ತ್ರೀ ಪತ್ರ ನಿರ್ವಹಿಸುವ ಪಾತರದವರ ಓಣಿಯು ಈ ಊರಲ್ಲಿದೆ.

ಧಾರ್ಮಿಕ ಚಟುವಟಿಕೆಗಳಿಗಾಗಿ ಓಣಿಗೆ ನಾಲ್ಕಾರು ಗುಡಿಗಳು ಈ ಊರಿನಲ್ಲಿವೆ. ನೇಕಾರರ ಆರಾಧ್ಯ ದೈವವಾದ ಬನಶಂಕರಿ ಗುಡಿಗಳಿಗಂತೂ ಇಲ್ಲಿ ಲೆಕ್ಕವೇ ಇಲ್ಲ. ವರ್ಷದುದ್ದಕ್ಕೂ ಈ ಊರಿನಲ್ಲಿ ಪುರಾಣ, ಪ್ರವಚನ, ಜಾತ್ರೆ, ಉತ್ಸವಗಳು ಜರುಗುತ್ತಲೇ ಇರುತ್ತವೆ. ಶ್ರಾವಣ ಮಾಸದ ಕೊನೆಯ ವಾರದಲ್ಲಿ ಜರುಗುವ ವಿಜಯ ಮಹಾಂತೇಶನ ತೇರು ಹಾಗೂ ಅಡ್ಡಪಲ್ಲಕ್ಕಿ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸ್ವರೂಪ ಪಡೆದುಕೊಂಡಿವೆ. ಫೆಬ್ರುವರಿಯಲ್ಲಿ ಜರುಗುವ ಮರ್ತುಜಾ ಖಾದ್ರಿ ಉರಸು ಪ್ರಾದೇಶಿಕ ಭಕ್ತರನ್ನು ಆಕರ್ಷಿಸುತ್ತದೆ. ಕೋಮು ಗಲಭೆಗಳಿಗೆ ಇದು ಹೊರತಾದ ಊರು. ಜಾತಿ, ಧರ್ಮ, ಅಂತರವಿಲ್ಲದೆ ಸಮಾಜದ ಎಲ್ಲ ಸ್ತರಗಳ ಜನ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಇಕ್ಕಟ್ಟಾದ ಸಂದಿಗಳಿಗೆ ಈ ಊರು ಖ್ಯಾತ. ಹೊಸಬರಿಗೆ ಈ ಸಂದಿಗಳು ಚಕ್ರವ್ಯೂಹ ರಚಿಸಿಬಿಡುತ್ತವೆ. ಆದರೆ ಅಂತಹ ಸಂದಿಗಳಲ್ಲಿಯೇ ನೇಕಾರಿಕೆಗೆ ಹಾಗೂ ವ್ಯಾಪಾರಕ್ಕೆ ಅನುಕೂಲವಾಗುವ ವಿಶಾಲ ಭವ್ಯ ಮನೆಗಳಿವೆ.

೧೯೬೩ ರಿಂದ ಇಳಕಲ್ಲ ಉನ್ನತ ಶಿಕ್ಷಣದತ್ತ ದಾಪುಗಾಲು ಹಾಕಿದೆ. ಮೊದಲು ಇಲ್ಲಿ ನಗರಸಭೆಯ ಮಾಧ್ಯಮಿಕ ಶಾಲೆ ಮಾತ್ರ ಇತ್ತು. ಇಳಕ್ಲಲಿನವರೇ ಆದ ಶ್ರೀ ಎಸ್.ಆರ್. ಕಂಠಿಯವರು ಇಲ್ಲಿ ಕಾಲೇಜು ಪ್ರಾರಂಭಿಸಲು ಅಂಕುರ ಹಾಕಿದರು. ಗುರು ಮಹಾಂತಸ್ವಾಮಿಗಳು ಬೃಹತ್ ದೇಣಿಗೆ ನೀಡಿದರು. ನಗರಸಭೆ ಕಾಲೇಜಿಗೆ ಸ್ಥಳದಾನ ಮಾಡಿತು. ಇಲ್ಲಿಯ ಬಡ ನೇಕಾರ ತನ್ನ ಶಕ್ಯಾನುಸಾರ ದೇಣಿಗೆ ಕೊಟ್ಟನು. ಕರಡಿ ರಾಮಣ್ಣ ಎಂಬವರು ತಮ್ಮ ಒಡೆತನದಲ್ಲಿದ್ದ ಬಲಕುಂದಿ ಗುಡ್ಡವನ್ನೇ ಸಂಸ್ಥೆಗೆ ದಾನ ನೀಡಿದರು. ಬಿರಾಡ ಕೊಡಲಾರದ ರಾಮಣ್ಣ ಗುಡ್ಡವನ್ನು ನಮ್ಮ ಕೊರಳಿಗೆ ಕಟ್ಟಿದೆ ಎಂದು ಕಾಲೇಜ ಆಡಳಿತ ಮಂಡಳಿ ಆಗ ಗೊಣಗಿದ್ದು ಉಂಟು. ಸ್ಥಳೀಯ ಸಂಪನ್ಮೂಲಗಳ ಕೊರತೆ ಸರ್ಕಾರದ ಅತಂತ್ರ ನೀತಿ ಮೊದಲಾದ ಕಾರಣಗಳಿಂದ ಕಾಲೇಜ ಸಿಬ್ಬಮದಿಗೆ ಸಂಬಳ ಕೊಡಲಾರದ ಸ್ಥಿತಿ ಇಲ್ಲಿ ಉಂಟಾಗಿತ್ತು. ಇಳಕಲ್ಲ, ಹುನಗುಂದ, ಜಮಖಂಡಿ ಹಾಗೂ ಗುಳೇದಗುಡ್ಡದಂತಹ ಪಟ್ಟಣಗಳಲ್ಲಿ ಆರ್ಥಿಕ, ಸಂಕಷ್ಟದಲ್ಲಿದ್ದ ಕಾಲೇಜ ಸಿಬ್ಬಂದಿ ಸಂಘಟನೆ ಹೊಂದಿ 'ಕವಿಕಾಶಿ' ಕಟ್ಟಿದ್ದು ಈಗ ಇತಿಹಾಸ. ಇದೇ ಸಂದರ್ಭದಲ್ಲಿ ಇಳಕಲ್ಲ ಕಾಲೇಜಿನ ಆಗಿನ ಪ್ರಾಚಾರ್ಯರು ಬಲಕುಂದಿ ಗುಡ್ಡದ ಕಲ್ಲನ್ನು ಹಲವು ಪರೀಕ್ಷೆಗೊಳಪಡಿಸಿ ಅದು ಕೆಂಪು 'ಗ್ರ್ಯಾನೈಟ್' ಎಂಬುದನ್ನು ಖಾತರಿಪಡಿಸಿಕೊಂಡರು. ತಮಿಳುನಾಡು, ಗುಜರಾತ, ಗೋವಾಗಳಿಂದ ಉದ್ದಿಮೆದಾರರನ್ನು ಕೆಂಪು ಕಂಬಳಿ ಹಾಸಿ ಕರೆತಂದರು. ಇಳಕಲ್ಲಿನ ಈ ಕೆಂಪು ಕಲ್ಲು ವಿಶ್ವದ ಮಾರುಕಟ್ಟೆಯಲ್ಲಿ ಬಹುಬೇಗನೆ ಜನಪ್ರಿಯವಾಯಿತು. ಇಳಕಲ್ಲ ಚಾಕಲೆಟ್ ಎಂದೇ ಖ್ಯಾತವಾಯಿತು. ಕಲ್ಲಿನ ದಂಧೆ ಅನಾಯಾಸ ಲಾಭಗಳಿಸುವ ಆಕರ್ಷಕ ಉದ್ದಿಮೆಯಾಗಿ ಕಂಡಿತು. ಇದು ಇಳಕಲ್ಲಿನ ಆರ್ಥಿಕ ಸ್ಥಿತಿಯನ್ನೇ ಸಂಪೂರ್ಣ ಬದಲಿಸಿತು. ಸಂಪತ್ತು ಇಲ್ಲಿ ಸ್ಫೋಟಗೊಂಡಾಯಿತು. ಲಕ್ಷ್ಮೀ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ಬರಲಿಲ್ಲ ಓಡುತ್ತಾ ಬಂದು ಇಲ್ಲಿ ಬಿದ್ದಂತಾಯಿತು. ಕೈ ಮಗ್ಗದ ಸೀರೆ ಉತ್ಪಾದಿಸುವ ಜವಳಿ ಉದ್ಯಮಕ್ಕೆ ಕೆಲಕಾಲ ಸ್ಥಾನಿಕ ಆತಂಕ ಇದು ಒಡ್ಡಿತು. ಹೊಸ ಶ್ರೀಮಂತ ವರ್ಗವನ್ನು ಕಲ್ಲಿನ ದಂಧೆ ಸೃಷ್ಟಿಸಿತು. ಬಡ ನೇಕಾರ ಈ ಮಿಂಚಿನ ಬದಲಾವಣೆಯಿಂದ ಗೊಂದಲಗೊಂಡ. ಭಾರತದ ಮಾರುಕಟ್ಟೆಗೆ ಹೊಸದಾಗಿ ಪರಿಚಯಿಸಲ್ಪಡುವ ಕಾರುಗಳು ಮೊದಲು ಇಳಕಲ್ಲಿಗೆ ಬರುತ್ತಿದ್ದವು ಎಂದರೆ, ಈ ಬದಲಾವಣೆಯ ತೀವ್ರತೆಯನ್ನು ಊಹಿಸಿಕೊಳ್ಳಬಹುದು. ಗುಡಿಸಲಿನ ವಾಸಿಗಳು ಕಲ್ಲಿನ ದಂಧೆಯಲ್ಲಿ ಅನಾಯಾಸ ಹಣಗಳಿಸಿ ಕೋಟಿಗಟ್ಟಲೆ ಖರ್ಚು ಮಾಡಿ ಮನೆ ಕಟ್ಟಿಸಿದರು. 'ಮತ್ತೆ 'ವಾಸ್ತು' ಪ್ರಕಾರ ಅದನ್ನು ಬದಲಿಸಿದರು. ಅಂದರೆ ಕುರುಡು ಕಾಂಚಾಣದ ಕುಣಿತವನ್ನು ಊಹಿಸಬಹುದು. ಇದೇ ಸಂದರ್ಭದಲ್ಲಿ ಡಬ್ಲಿಂಗ್ ದೊರೆ ಇಲ್ಲಿ ಹುಟ್ಟಿಕೊಂಡ. ದಿಢೀರನೆ ಶ್ರೀಮಂತರಾಗುವ

ದಾಹ ಹೆಚ್ಚಿತು. ಮೇಲ ಮಧ್ಯಮ ವರ್ಗ ವಿಶೇಷ ಆಕರ್ಷಿತರಾಗಿ ಡಬ್ಲಿಂಗ್ ದಂಧೆಯಲ್ಲಿ ಕೈ ಸುಟ್ಟುಕೊಂಡ ಉದಾಹರಣೆಗಳು ಹೇರಳ.

ಶತ-ಶತಮಾನಗಳಿಂದ ಸೀರೆ ಉದ್ದಿಮೆ ಹಾಗೂ ಧಾರ್ಮಿಕ, ಸಾಂಸ್ಕೃತಿಕ ಜೀವಂತಿಕೆ ಪಡೆದ ಇಳಕಲ್ಲ ಈ ಶತಮಾನದ ಕೊನೆಯಲ್ಲಿ ಆರ್ಥಿಕ ವ್ಯವಹಾರಗಳ ಏರು ಪೇರು ಕಂಡು ಗೊಂದಲಗೊಂಡಿದೆ. ಈಗ ಇಳಕಲ್ಲ ತನ್ನ ಮೂಲ ಉದ್ಯೋಗ ಕೈಮಗ್ಗದ ಸೀರೆಯ ಉತ್ಪಾದನೆಯತ್ತ ಅನಿವಾರ್ಯವಾಗಿ ವಾಲುವ ಸ್ಥಿತಿ ತಲುಪಿದೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಇಳಕಲ್ಲ ಸೀರೆ ಉದ್ಯಮದ ಏಳುಬೀಳುಗಳನ್ನು ಅವಲೋಕಿಸಬೇಕಾಗಿದೆ.

**ಸೀರೆಯ ಅರ್ಥಶಾಸ್ತ್ರ**

“ಇಳಕಲ್ಲ ಸೀರೆ ಉಟ್ಗೊಂಡು
ಮೊಣಕಾಲತನ ಎತ್ಗೊಂಡು

ಏರಿ ಮೇಲೆ ಏರಿ ಬಂದ ನಾರಿ”……………. ಎಂಬ ಹಳ್ಳಿ ಮೇಷ್ಟ್ರು ಸಿನೇಮಾದ ಹಾಡನ್ನು ಕೇಳಿದರೆ ಮುದುಕರಿಗೂ ಮೈ ಬಿಸಿಯಾಗುತ್ತದೆ. ಇಳಕಲ್ಲ ಸೀರೆಯ ಆಕರ್ಷಣೆಯೇ ಹಾಗಿದೆ. ಇಂದು ಈ ಪಟ್ಟಣ ತನ್ನ ಹಳೆಯ ಪೊರೆ ಕಳಚಿ ಆಧುನಿಕತೆಯತ್ತ ದಾಪುಗಾಲು ಹಾಕುತ್ತಿದೆ. ರಾಷ್ಟ್ರೀಯ ಹೆದ್ದಾರಿ ೧೩ ಹಾಗೂ ರಾಜ್ಯ ಹೆದ್ದಾರಿ (ಹೈದ್ರಾಬಾದ…..ವೆಂಗುರ್ಲಾ) ೨೦ ರೊಂದಿಗೆ ನೇರ ಸಂಪರ್ಕ ಪಡೆದಿದೆ.

ನೇಕಾರಿಕೆ ಕೃಷಿಯಂತೆ ಹೆಚ್ಚು ದೈಹಿಕಶ್ರಮ ಅಪೇಕ್ಷಿಸುವ ವೃತ್ತಿಯಲ್ಲ. ಕೃಷಿಕ ಮಳೆ ಗಾಳಿ ಬಿಸಿಲುಗಳಿಗೆ ತನ್ನನ್ನೊಡ್ಡಿಕೊಳ್ಳುತ್ತಾನೆ. ಆದರೆ ನೇಕಾರ ಇವುಗಳಿಮದ ರಕ್ಷಿತ. ನೇಕಾರನ ಹೆಚ್ಚಿನ ಶ್ರಮ ನಿರ್ವಹಣೆ ಮನೆಯ ಆವರಣದಲ್ಲಿಯೆ ಜರಗುತ್ತದೆ. ಕೃಷಿಕನ ಉತ್ಪಾದನೆ ಹಾಗೂ ಅದರಿಂದ ಬರುವ ಆದಾಯ ಅನಿಶ್ಚಿತ. ಆದರೆ ನೇಕಾರನ ಶ್ರಮಕ್ಕೆ ಹಾಗೂ ಅವನ ಉತ್ಪಾದನೆಗೆ ಕನಿಷ್ಠ ಬೆಲೆಯನ್ನು ನಿಗದಿಮಾಡುವ ಅವಕಾಶವಿದೆ. ಕೃಷಿಗೆ ಹೋಲಿಸಿದರೆ ಜವಳಿ ಉದ್ದಿಮೆ ಹೆಚ್ಚು ಸಂಘಟಿತ ಎಂದೇ ಹೇಳಬಹುದು.

ನೇಕಾರಿಕೆ ವೃತ್ತಿಯ ವಿಶೇಷತೆ ಎಂದರೆ ಎಲ್ಲ ವಯೋಮಾನದವರಿಗೆ ಇದು ಕೆಲಸ ಕೊಡುತ್ತದೆ. ಆರು ವರ್ಷದವರಿಂದ ಅರವತ್ತು ವರ್ಷದವರು ಇಲ್ಲಿ ಶ್ರಮ ನಿರ್ವಹಿಸುವ ಅವಕಾಶವಿದೆ. ನೂಲು ತೋಡುವ, ಹಾಸು ಹೊಯ್ಯುವ, ಕಂಡಕಿ ಸುತ್ತುವ, ಕೆಚ್ಚುವ,  ಟಾಣು ಹಾಕುವ, ಹಣಿಗೆ ಕೆಚ್ಚುವ, ಮಗ್ಗಕ್ಕೇರಿಸುವ, ನೇಯುವ, ಸೆರಗುಗಳಿಗೆ ಗೊಂಡೆ ಕಟ್ಟುವ, ಗಿರಾಕಿ ಇಚ್ಛಿಸಿದರೆ ಕಸೂತಿ ಹಾಕುವ, ಸಿದ್ಧವಾದ ಸೀರೆಗಳನ್ನು ದೇವರಿಗೆ ನೈವೇದ್ಯ ಒಯ್ಯುವಂತೆ ಗೌರವ ನಯ-ನಾಜೂಕುಗಳಿಂದ ಗಳಿಗೆಗಳನ್ನು ವ್ಯಾಪಾರಸ್ಥರಿಗೆ ಮುಟ್ಟಿಸುವ ಹೀಗೆ ಹತ್ತು ಹಲವು ಕಾರ್ಯಗಳಲ್ಲಿ ಮನೆಮಂದಿಯೆಲ್ಲ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಹೀಗಾಗಿ ಇದು ಕೌಟುಂಬಿಕ ವೃತ್ತಿಯಾಗಿದೆ. ವಯಸ್ಸು ಹಾಗೂ ಲಿಂಖಗ ಆಧಾರಿತ ಶ್ರಮ ವಿಭಜನೆ ಇಲ್ಲಿ ಕಡಿಮೆ. ಒಂದು ರೀತಿಯಿಂದ ಗೃಹ ಕೈಗಾರಿಕೆಯಾಗಿದೆ.

ನೇಕಾರಿಕೆ ಕ್ರಮೇಣ ಸುಧಾರಣೆ ಹೊಂದಿ ಜವಳಿ ಉದ್ದಿಮೆಯಾಗಿ ರೂಪಾಂತರ ಹೊಂದಿದೆ. ಜವಳಿ ಉದ್ದಿಮೆಯಲ್ಲಿ ಪ್ರಮುಖವಾಗಿ ಮೂರು ವಿಭಾಗಗಳನ್ನು ಕಾಣಬಹುದು. ಕೈಮಗ್ಗ, ವಿದ್ಯುತ್ ಚಾಲಿತ ಮಗ್ಗ ಹಾಗೂ ಗಿರಣಿಗಳು. ಭಾರತದಲ್ಲಿ ತಮಿಳುನಾಡು ಹಾಗೂ ಅಸ್ಸಾಂಗಳಲ್ಲಿ ಕೈಮಗ್ಗಗಳ ಸಂಖ್ಯೆ ಹೆಚ್ಚು. ಈ ಸಾಲಿನಲ್ಲಿ ಕರ್ನಾಟಕ ಎಂಟನೆಯ ಸ್ಥಾನದಲ್ಲಿದೆ. ಭಾರತದಲ್ಲಿ ಪ್ರತಿವರ್ಷ ಸುಮಾರು ಐದು ದಶಲಕ್ಷ ಮೀಟರ ಬಟ್ಟೆ ಕೈಮಗ್ಗದ ಕ್ಷೇತ್ರದಿಂದಲೇ ಉತ್ಪಾದನೆಯಾಗುತ್ತಿದೆ. ಕರ್ನಾಟಕದಲ್ಲಿ ಸುಮಾರು ಎಂಬತ್ತೆರಡು ಸಾವಿರ ಕೈ ಮಗ್ಗಗಳಿವೆಯೆಂದು ಅಂದಾಜು ಮಾಡಲಾಗಿದೆ. ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಇವು ಸಮಾನವಾಗಿ ಹಂಚಲ್ಪಟ್ಟಿಲ್ಲ. ರಾಜ್ಯದ ಉತ್ತರ ಜಿಲ್ಲೆಗಳಲ್ಲಿ ಹೆಚ್ಚು ಕೈಮಗ್ಗಗಳಿವೆ. ಅವಿಭಜಿತ ಬಿಜಾಪುರ ಜಿಲ್ಲೆಯಲ್ಲಿ ಅತಿ ಹೆಚ್ಚು ಕೈ ಮಗ್ಗಗಳಿವೆ. ಸುಮಾರು ಒಂಬತ್ತು ಲಕ್ಷ ಜನರಿಗೆ ಇದು ಉದ್ಯೋಗ ನೀಡಿದೆ. ಪ್ರಾದೇಶಿಕವಾಗಿ ಇವುಗಳ ಖ್ಯಾತಿ ಹೇಗಿದೆಯೆಂದರೆ ನಾಮಬಲದಿಂದಲೆ ಇವು ಮಾರುಕಟ್ಟೆ ಪಡೆದುಕೊಂಡಿವೆ. ಉದಾಹರಣೆಯಾಗಿ ಇಳಕಲ್ಲ ಸೀರೆ, ಗುಳೇದಗುಡ್ಡದ ಖಣ, ಕಮತಗಿಯ ಪಟಗ, ಸೂಳೇಭಾವಿಯ ದೋತ್ರ ಮುಂತಾಗಿ. ಇಳಕಲ್ಲಿನಲ್ಲಿ ಸುಮಾರು ಹತ್ತು ಸಾವಿರ ಕೈಮಗ್ಗಳಿವೆ. ಇದು ನಲವತ್ತು ಸಾವಿರ ಜನರಿಗೆ ಉದ್ಯೋಗ ಒದಗಿಸಿದೆಯೆಂದು ಹೇಳಲಾಗುತ್ತಿದೆ.

ಬೀಜ ಕಳೆದುಕೊಂಡ ಹತ್ತಿ ಅರಳಿಯಾಗುತ್ತದೆ, ಅರಳಿ ಹಿಂಜಲ್ಪಟ್ಟು ಹಂಜಿಯಾಗುತ್ತದೆ; ಹಂಜಿ ನೂಲಾಗಿ ಲಡಿಗೆ ತೋಡಲ್ಪಡುತ್ತದೆ. ವಿವಿಧ ಬಣ್ಣ ಪಡೆದುಕೊಂಡ ನೂಲನ್ನು ಸೀರೆಯ ರೂಪಕ್ಕನುಗುಣವಾಗಿ ಹಾಸುಹೊಯ್ಯಲಾಗುತ್ತದೆ. ಹಾಸು ಹಣಿಗಿಗೆ ಕಟ್ಟಿ ಮಗ್ಗಕ್ಕೆ ಏರಿಸುತ್ತಾರೆ. ಮಗ್ಗದ ತೆಗ್ಗಿನ ಕುಣಿಯಲ್ಲಿ ಅರ್ಧ ದೇಹ ಇಳಿಬಿಟ್ಟ ನೇಕಾರ ಹಾಸಿನ ಅಣಿ ಎತ್ತಿ ಹೊಟ್ಟೆಯಲ್ಲಿ ವಿವಿಧ ಬಣ್ಣದ ಲಾಳಿ ಓಡಿಸಿ ನೇಯುತ್ತಾನೆ. ನೇಯುವದು ಅತ್ಯಂತ ನಾಜೂಕಿನ ಕೆಲಸ. ಆದ್ದರಿಂದಲೇ "ಒಂದು ಅಣಿ ತಪ್ಪಿದರೆ ಸಾವಿರ ಅಣಿ ತಪ್ಪುತ್ತವೆ" ಎಂಬ ಗಾದೆ ಹುಟ್ಟಿರಬಹುದು. ಸಿದ್ಧವಾದ ಸೀರೆಯನ್ನು ನೇಕಾರ ವ್ಯಾಪಾರಸ್ಥನಿಗೆ ಕೊಡುತ್ತಾನೆ. ವ್ಯಾಪಾರಿ ಆಕರ್ಷಕ ರೀತಿಯಲ್ಲಿ ಸೀರೆಯನ್ನು ಗಳಿಗೆ ಹಾಕಿ ಉಪಭೋಗದಾರನಿಗೆ ಮಾರುಕಟ್ಟೆಯ ಮೂಲಕ ತಲುಪಿಸುತ್ತಾನೆ.

ಹತ್ತಿ ಬೆಳೆಯುವ ಕೃಷಿಕ, ನೂಲಿನ ಬಣ್ಣ ಹಾಕುವ ಬಣಗಾರನಿಂದ ಹಿಡಿದು ನೇಕಾರಿಕೆಯಲ್ಲಿ ವಿವಿಧ ಕಾರ್ಯ ಪೂರೈಸುವ ವೃತ್ತಿ ಸಮೂಹಗಳು ಪಳಿಯುಳಿಕೆ ರೂಪದಲ್ಲಿ ಇಂದಿಗೂ ಇವೆ. ಆದರೆ ನೂಲುವುದನ್ನೇ ಕಸಬಾಗಿ ಮಾಡಿಕೊಂಡ ವೃತ್ತಿ (ಜಾತಿ) ಸಮೂಹ ಈಗ ಮಾಯವಾಗಿದೆ. ಬಹುಶಃ ಗಿರಣಿ ನೂಲು ಈ ಗುಂಪನ್ನು ನುಂಗಿ ಹಾಕಿದೆ. ನೂಲಿ ಚಂದಯ್ಯ ಶರಣರ ಹೆಸರು ೧೨ ನೆಯ ಶತಮಾನದಲ್ಲಿ ದಾಖಲಾಗಿದೆ. ಆದರೆ ಆತನ ವೃತ್ತಿ ಹುಲ್ಲಿನಿಂದ ಹಗ್ಗ ಹೊಸೆಯುವುದಾಗಿತ್ತೆಂಬುದನ್ನು ಗಮನಿಸಬಹುದು.

ಇಳಕಲ್ಲ ಸೀರೆಯ ವಿಶೇಷತೆಯಿರುವುದೇ ಅದರ ಬಣ್ಣದ ಗುಣ ಹಾಗೂ ವಿನ್ಯಾಸದಲ್ಲಿ. ಸೀರೆ ಹರಿದರೂ ಬಣ್ಣ ಮಾಸುವುದಿಲ್ಲ ಎಂಬ ನಂಬಿಕೆಯಿದೆ. ನೂಲಿಗೆ ಬಣ್ಣ ಹಾಕುವ ವೃತ್ತಿಯಲ್ಲಿ ಬಣಗಾರ ಹಾಗೂ ನೀಲಗಾರ ಎಂಬ ಗುಂಪುಗಳಿವೆ. ಬಣಗಾರರು ನೂಲಿಗೆ ಎಲ್ಲ ತರದ ಬಣ್ಣ ಹಾಕುತ್ತಾರೆ. ಆದರೆ ನೀಲಗಾರರು ಕೇವಲ ಕರಿ ಬಣ್ಣ ಮಾತ್ರ ಹಾಕುತ್ತಾರೆ. ಕಪ್ಪು, ಕರಿ ಎಂಬ ಶಬ್ದ ಜಾತಿಯ ಶ್ರೇಣೀಕರಣದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಉದಾಹರಣೆಯಾಗಿ ಕರಿಜಾಡ, ಕರಿ ಗಾಣಿಗ, ಉಣ್ಣೆ ಕಂಕಣ, ಮುಂತಾಗಿ. ಒಂದು ಕಾಲದಲ್ಲಿ ಮಹಿಳೆಯರು ತೊಡುವ ಬಟ್ಟೆಗಳನ್ನು ಕಪ್ಪು

ಬಟ್ಟೆಯೆಂದೇ ಕರೆಯಲಾಗುತ್ತಿತ್ತು. ಹೆಣ್ಣು ಹಾಗೂ ಕಪ್ಪು ಕೀಳೆಂದು ಪುರುಷಮೌಲ್ಯಗಳು ಸಮೀಕರಿಸಿದ ಸಂದರ್ಭ ಕಾಣಬಹುದು. ಇದು ವೈದಿಕದ ಪ್ರಭಾವವಾಗಿರಬಹುದು. ನೂಲಿಗೆ ಕರಿಬಣ್ಣ ಹಾಕುವ ನೀಲಗಾರ ಬಣಗಾರನಿಗಿಂತ ಶ್ರೇಣಿಯಲ್ಲಿ ಕೀಳೆಂದು ಪರಿಗಣಿಸಲಾಗಿದೆ. ಇವರಲ್ಲಿ ಊಟೋಪಚಾರ ನಡೆಯುತ್ತಿದೆ; ವಿವಾಹ ಸಂಬಂಧ ಏರ್ಪಡುವುದಿಲ್ಲ.

ಇಳಕಲ್ಲ ಸೀರೆಯ ಬಣ್ಣ ಗ್ಯಾರಂಟಿ ಎಂಬುದಕ್ಕೆ ಇಲ್ಲಿಯ ಹಳ್ಳದ ನೀರಿನಲ್ಲಿರುವ ಲವಣಾಂಶಗಳೆ ಕಾರಣವೆಂದು ಅನುಭವಿ ಬಣಗಾರರ ಅನಿಸಿಕೆಯಾಗಿದೆ. ಬಣ್ಣ ಹಾಕುವ ಕಾರ್ಯ ಒಂದುಕಾಲಕ್ಕೆ ವೃತ್ತಿ ಗೌಪ್ಯತೆ ಕಾಪಾಡಿಕೊಂಡಿತ್ತು. ಮಂತ್ರ, ಮಾಟ ಪೂಜೆಗಳಲ್ಲದೆ ಕೆಟ್ಟ ಕಣ್ಣುಗಳಿಂದ ರಕ್ಷಣೆ ಪಡೆಯುವ ತಂತ್ರ ಇಲ್ಲಿ ಬಳಕೆಯಲ್ಲಿತ್ತು. ಕ್ರಮೇಣ ಅಂತಹ ಮೂಢನಂಬಿಕೆಗಳನ್ನು ಈ ವೃತ್ತಿ ಕಳಚಿಕೊಂಡಿದೆ. ನೈಸರ್ಗಿಕ ವನಸ್ಪತಿಗಳ ಬೇರು, ಬೀಜ, ಕಾಂಡ, ತೊಗಟೆ, ತಪ್ಪಲುಗಳಿಂದ ವಿವಿಧ ಬಣ್ಣ ತಯಾರಿಸುವ ಬಣಗಾರರು (ಹಳೆಯ ಆಯುರ್ವೇದ ಪಂಡಿತರಂತೆ) ತಾವು ಬಳಸುವ ವನಸ್ಪತಿಗಳ ಹೆಸರು ಹೇಳಲೂ ಹಿಂಜರಿಯುತ್ತಿದ್ದರು. ವಿವಿಧ ಬಣ್ಣ ತಯಾರಿಕೆಯಲ್ಲಿ ಅಳ್ಳಿಕಾಯಿ ಬೀಜ, ಕಗ್ಗಲ ಬೀಜ, ಕಪೀಲಿ ಬೀಜ, ಮಡ್ಡಿಬೇರು, ವಿವಿಧ ಸಸ್ಯಗಳ ತಪ್ಪಲು, ತೊಗಟೆ ಹಾಗೂ ಸುಣ್ಣ ಅರಿಷಣ, ಕಿರಮಂಜ ಬಳಸುತ್ತಿದ್ದರಂತೆ. ಇಳಕಲ್ಲನ್ನು ಸುತ್ತುವರೆದ ಹಿರೇಹಳ್ಳಕ್ಕೆ ಮೂರ್ನಾಲ್ಕು ಕಿರಿ ಎರೆ ಹಳ್ಳಗಳು ಸಂಗಮಿಸುತ್ತವೆ. ಎರಿ (ಕಪ್ಪು) ಹಾಗೂ ಮಸಾರಿಭೂಮಿಯಿಂದ ಹರಿದು ಬರುವ ನೀರು ವಿಶೇಷ ಲವಣಾಂಶ ಪಡೆದುಕೊಂಡಿರಬಹುದು. ವೈಜ್ಞಾನಿಕ ವಿಶ್ಲೇಷಣೆಗೆ ಈ ಹಳ್ಳದ ನೀರನ್ನು ಒಳಪಡಿಸಿದ ತಜ್ಞರು ಫ್ಲೋರಾಯಿಡ್ ಪ್ರಮಾಣ ಈ ನೀರಿನಲ್ಲಿ ಹೆಚ್ಚು ಇದೆ ವಸಡು ಹಾಗೂ ಎಲುವಿನ ಕೀಲುಗಳಿಗೆ ಈ ನೀರು ಅಪಾಯಕಾರಿಯೆಂದು ಹೇಳುತ್ತಾರೆ. ಆದರೆ ನೂಲಿಗೆ ಬಣ್ಣ ಹಾಕಲು ಈ ನೀರು ಏಕೆ ಹೀಗೆ ಉಪಯುಕ್ತ ಎಂಬುದು ಇನ್ನೂ ವಿಶ್ಲೇಷಣೆಗೆ ಒಳಪಡಬೇಕಾಗಿದೆ. ಕನ್ನಡದ ಅಂಕಿಗಳನ್ನು ಸ್ವಾಭಿಮಾನದಿಂದ ಬಳಸುವ ಇಳಕಲ್ಲ ವ್ಯಾಪಾರಸ್ಥ ಗುರುನಾಥಪ್ಪ ನಾಗಲೋಟಿ ಹೇಳುವಂತೆ ಹಳ್ಳದ ನೀರು ಹಾಗೂ ವನಸ್ಪತಿ ಬಣ್ಣ ಬಳಸುವಾಗ ನೂಲಿನ ತಾಳಿಕೆ ಹೆಚ್ಚು ಇರುತ್ತಿತ್ತು. ರಾಸಾಯನಿಕ ಬಣ್ಣಗಳ ಪರಿಣಾಮದಿಂದ ನೂಲಿನ ಆಯುಷ್ಯ ಕಡಿಮೆಯಾಗಿದೆ ಎಂದು ಹೇಳುತ್ತಾರೆ. ಆದರೆ ರಾಸಾಯನಿಕ ಬಣ್ಣ ಹೆಚ್ಚು ಆಕರ್ಷಕ ಹಾಗೂ ಮಿಶ್ರಣ ಮಾಡಲು ಸರಳ ಎಂದು ಹೇಳಲು ಮರೆಯುವುದಿಲ್ಲ. ಇಂದು ಸಂಪೂರ್ಣವಾಗಿ ರಾಸಾಯನಿಕ ಬಣ್ಣಗಳೆ ಈ ಉದ್ದಿಮೆಯಲ್ಲಿ ಬಳಕೆಯಾಗುತ್ತಿವೆ. ನೂಲಿಗೆ ಬಣ್ಣ ಹಾಕಿ ಒಣಗಿಸಿ ಕೊಡುವ ಬಣಗಾರನ ವೃತ್ತಿ ಆತಂಕಕಾರಿ. ಬಣ್ಣದ ವಾಸನೆ, ಅದರ ಕಾಕ, ವಿಷಪೂರಿತ ರಾಸಾಯನಿಕ ಬಣ್ಣಗಳ ಒಡನಾಟ ಅವನ ಆರೋಗ್ಯದ ಮೇಲೆ ತೀವ್ರ ಪರಿಣಾಮವನ್ನು ಉಂಟು ಮಾಡುತ್ತವೆ. ಆತನ ಚರ್ಮ ವಿಕಾರವಾಗುವುದು ಸಾಮಾನ್ಯ.

ಇಲಕಲ್ಲ ಸಿರೆಯ ವಿಶಿಷ್ಟತೆ ಇರುವುದು ಇದರ ವಿನ್ಯಾಸದಲ್ಲಿ. ಸೀರೆಯ ಮುಖ್ಯ ಭಾಗಗಳೆಂದರೆ ಸೆರಗು, ದಡಿ, ವಡ್ಲ. ಕಾಲದಿಂದ ಕಾಲಕ್ಕೆ ಇವುಗಳಲ್ಲಿ ತೀವ್ರ ಬದಲಾವಣೇಗಳಾಗಿಲ್ಲ ಎಂದರೂ ಕ್ರಮೇಣ ಬದಲಾವಣೆಗಳು ಉಂಟಾಗಿವೆ. ಇಲಕಲ್ಲ ಸೀರೆಯ ವಿನ್ಯಾಸದಲ್ಲಿ ಬದಲಾವಣೆ ತಂದವರು-Textile Designing ಕ್ಷೇತ್ರದ ಪದವೀಧರರಲ್ಲ ಅಥವಾ ತಾವು ಶೋಧಿಸಿದ ವಿನ್ಯಾಸದ ಮೇಲೆ ಪೇಟೆಂಟ ಹಕ್ಕನ್ನು ಸ್ಥಾಪಿಸಿಕೊಂಡವರಲ್ಲ. ಹೊಟ್ಟೆಪಾಡಿಗಾಗಿ ಈ ವೃತ್ತಿಯಲ್ಲಿ ತೊಡಗಿಕೊಂಡವರು. ಪ್ರಯೋಗಶೀಲ ಮನಸ್ಸಿನ ನೇಕಾರರು ನೂಲಿನ ಗಾತ್ರ, ಪ್ರಮಾಣ ಹಾಗೂ ಬಣ್ಣಗಳ ಹೊಂದಾಣಿಕೆಯಲ್ಲಿ ಬದಲಾವಣೆ ತಂದು ಸೀರೆಗಳು ಜನಾಕರ್ಷಕವಾಗುವ ರೀತಿಯಲ್ಲಿ ರೂಪಿಸಿದ್ದಾರೆ. ಸೃಜನಶೀಲತೆ

ಕೇವಲ ಸಾಹಿತಿ, ಕಲಾವಿದರ ಗುತ್ತಿಗೆಯಲ್ಲ. ಅರ್ಧ ದೇಹವನ್ನು ಮಗ್ಗದ ಕುಣಿಯಲ್ಲಿ ಇಳಿಬಿಟ್ಟ ನೇಕಾರನೂ ಒಂದು ರೀತಿಯಿಂದ ಸೃಜಶೀಲನೇ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಅವಶ್ಯಕತೆ ಸಂಶೋಧನೆಗೆ ದಾರಿ ಎಂದು ಹೇಳುತ್ತಾರೆ. ಆದರೆ ಮಹತ್ವಾಕಾಂಕ್ಷಿತನವು ಹೊಸದನ್ನು ಹುಟ್ಟು ಹಾಕಬಲ್ಲದು ಎಂಬುದಕ್ಕೆ ಅನೇಕ ನೇಕಾರರು ಉದಾಹರಣೆಯಾಗಿದ್ದಾರೆ. ಹುನಗುಂದ ತಾಲೂಕಿನ ಅಮೀನಗಡದ ನೇಕಾರ ಮಲಕಪ್ಪ ಮುಸರಿ ಜೀವಂತ ಸಾಕ್ಷಿಯಾಗಿದ್ದಾನೆ. ಕಣ್ಣಲ್ಲಿ ಕಣ್ಣಿಟ್ಟು ಲಾಳಿ ಓಡಿಸುವುದೇ ಸೂಕ್ಷ್ಮ ಕೆಲಸ. ಅಂತಹದ್ದರಲ್ಲಿ ಸೀರೆಯ ಸೆರಗಿನಲ್ಲಿ ಮಹಾತ್ಮ ಗಾಂಧೀಜಿ ಭುವನೇಶ್ವರಿ, ಭಾರತ, ಕರ್ನಾಟಕ, ಬಾಗಲಕೋಟೆ ಜಿಲ್ಲೆಯ ನಕಾಶೆ ನೇಯ್ದು ಅದರಲ್ಲಿ ಚುಕ್ಕೆಗಳಿಂದ ಹುನಗುಂದ ತಾಲೂಕ ಹಾಗೂ ಅಮೀನಗಡ ಗ್ರಾಮ ಗುರುತಿಸುವುದು ಎಷ್ಟು ಕಷ್ಟಕರ ಎಂಬುದನ್ನು ಊಹಿಸಬಹುದು. ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ನೆನಪಿಗೆ ಒಬ್ಬ ಬಡನೇಕಾರ ತನ್ನ ಭಾವಸ್ಪಂದನೆಗಳನ್ನು ತನ್ನ ವೃತ್ತಿಯಲ್ಲಿ ಕಲೆಯಾಗಿ ಮೂಡಿಸಿದ್ದಾನೆ. ಚಿತ್ರ, ರಂಗೋಲಿ, ಕಸೂತಿ ಹಾಕಲು ಸಿದ್ಧ ಮಾದರಿ ಇರುತ್ತದೆ. ಆದರೆ ಸೀರೆಯ ನೇಯ್ಗೆಯಲ್ಲಿ ಚಿತ್ರ ಬಿಡಿಸುವುದೆಂದರೆ ಅದರ ಕ್ಲಿಷ್ಟತೆ ಊಹಿಸಬಹುದು. ನೇಕಾರನ ಕಲ್ಪನೆಯೇ ಇಲ್ಲಿ ಸಾಕಾರಗೊಳ್ಳಬೇಕಾಗುತ್ತದೆ.

ಈ ಶತಮಾನದ ಪ್ರಾರಂಭದಲ್ಲಿ ಗಚ್ಚಿ ದಡಿ ಸೀರೆಗಳು ಹೆಚ್ಚು ಚಲಾವಣೆಯಲ್ಲಿದ್ದವು. ಅದರ ಬದಲಾಗಿ ಈಗ ಗೋಮಿ ದಡಿ ಸೀರೆ ಹೆಚ್ಚು ಜನಪ್ರಿಯವಾಗಿದೆ. ಗೋಧಿಕಾಳುಗಳನ್ನು ಸಾಲಾಗಿ ಜೋಡಿಸಿಟ್ಟ ವಿನ್ಯಾಸ ಇಲ್ಲಿ ಕಾಣಬಹುದು. ಗೋಮಿ ದಡಿಯೆ ಇಲಕಲ್ಲ ದಡಿ ಎಂದು ಈಗ ಜನಪ್ರಿಯವಾಗಿದೆ. ಈ ಹೊಸತನ ರೂಪಿಸಿದವರು ಇಲಕಲ್ಲಿನ ರಾಜಪ್ಪ ದೋತ್ರೆ ಎಂದು ಹೇಳುತ್ತಾರೆ. ಈ ದಡಿಯ ಜೊತೆಗೆ ಸೀರೆಯ ವಡ್ಲದಲ್ಲಿ ಕಡ್ಡಿ, ದಪ್ಪಳ, ರಾಗಾವಳಿ, ಚಂದ್ರಕಾಳಿ ಮುಂತಾದ ನಮೂನೆಗಳು ರೂಪುಗೊಂಡವು. ಕ್ರಮೇಣ ಸಾದಾ ಸೆರಗಿನ ಬದಲು ತೋಪುತೆನಿ (ಬುಗಡಿ) ತಿರುವಿದ ಸೆರಗುಗಳು ಹುಟ್ಟಿಕೊಂಡವು. ಈ ಸೆರಗು ಅತ್ಯಂತ ಕಲಾತ್ಮಕ ಹಾಗೂ ಆಕರ್ಷಕವಾಗಿರುತ್ತದೆ. ಇದರಲ್ಲಿ ಬಣ್ಣದ ಹೊಂದಾಣಿಕೆ ಕವಿಯ ಕಲ್ಪನೆಗೂ ಮೀರಿದ್ದು. ಕಸೂತಿ ಕುಸುರಿನ ನೈಪುಣ್ಯತೆ ಇದು ಹೊಂದಿರುತ್ತದೆ. ಮೂರು ಲಾಳಿಗಳನ್ನು ಬಳಸಿ ಇಬ್ಬರು ಒಟ್ಟಿಗೆ ಇದನ್ನು ನೇಯುತ್ತಾರಂತೆ. ತೋಪತೆನಿ ಸೆರಗು 'ಇಲಕಲ್ಲ ಸೆರಗು' ಎಂದೇ ಇಂದು ಮಾರುಕಟ್ಟೆಯಲ್ಲಿ ಖ್ಯಾತವಾಗಿದೆ. ಬೇರೆ ಪ್ರದೇಶದ ವ್ಯಾಪಾರಸ್ಥರು ಇಲಕಲ್ಲ ಸೆರಗು ಎಂದು ಹೇಳಿ ನಕಲಿ ಮಾಲು ಮಾರುವುದರ ಬಗ್ಗೆ ಇಲಕಲ್ಲ ವ್ಯಾಪಾರಸ್ಥರಿಗೆ ರೋಷಿ ಇದೆ. ಆದರೆ ಈ ರೋಷ ನೇಕಾರರಿಗೆ ಇಲ್ಲ. ಬಹುಶಃ ವ್ಯಾಪಾರಸ್ಥ ಲಾಭಕ್ಕೆ ಗಮನಹರಿಸುವುದು, ನೇಕಾರ ಹೊಟ್ಟೆಪಾಡಿಗೆ ಪರಿತಪಿಸುವುದು ಇದಕ್ಕೆ ಕಾರಣವಾಗಿರಬಹುದು.

ಸೀರೆಗಳ ವಿನ್ಯಾಸದಲ್ಲಿ ಆವಿಷ್ಕಾರ ಮಾಡಲು ಯತ್ನಿಸಿ ಕೈ ಸುಟ್ಟುಕೊಂಡ ಉದಾಹರಣೆಗಳೂ ಇವೆ. ನಾಗಮುರಿಗೆ ಸೆರಗು, ಸಾಟಿನ ದಡಿ ಪರಿಚಯಿಸಿದಾಗ ಅವುಗಳಗೆ ಮಾರುಕಟ್ಟೆಯಲ್ಲಿ ಬೇಡಿಕೆ ಕುದರಲಿಲ್ಲ. ಇಂತಹ ಬದಲಾವಣೆ ತಂದ ಕೆಲವು ಉದ್ದಿಮೆದಾರರು ದಿವಾಳಿ ತೆಗೆದ ಉದಾಹರಣೆಗಳು ಇವೆ. ಕ್ರಮೇಣ ಇವುಗಳಲ್ಲಿ ಚಿಕ್ಕ ಪರಾಸ, ಪ್ಲೇನ್, ಚೆಕ್ಸ್, ಕಡ್ಡಿ (ಎಳ್ಳು ಹೂ, ಪಂಚರಂಗಿ), ರಾಗಾವಳಿ, ಗಟ್ಟಿ ದಡಿ, ಗಾಡಿ ದಡಿ, ರೂಫಿಲ್ (ಗಾಯತ್ರಿ), ದೊಡ್ಡ ದಡಿ, ರುದ್ರಾಕ್ಷಿ ದಡಿ, ಗೊಡ್ಡ ಪರಾಸ, ರಾಸ್ತಾ ಕರಿ, ಕೊಂಡಿ ಚಿಕ್ಕಿ, ಪರಾಸ ಪೇಟ, ಬುಗಡಿ ಪರಾಸ ಪೇಟ, ಜರಿ ದಡಿ, ಷರ್ಟಿಂಗ್, ಚಂದ್ರಕಾಳಿ, ಮದೂಪ ಕಡ್ಡಿ, ಚೌಕಾನಿ (ಪುತಳಿ), ಪುಟಾಣಿ, ಜಬ್ಬರ, ರಾಸ್ತಾ ಮುಂತಾದ ವಿನ್ಯಾಸದ ಸೀರೆಗಳು

ಮಾರುಕಟ್ಟೆಗೆ ಬಂದವು. ದಡಿ, ಸೆರಗು, ವಡ್ಲಗಳನ್ನು ವಿದ್ಯುತ್ ಮಗ್ಗಗಳಲ್ಲಿ ಬೇಗನೇ ಬದಲಿಸುವ ಅವಕಾಶ ಇದೆ. ಆದರೆ ಕೈ ಮಗ್ಗಗಳಲ್ಲಿ ಈ ಅವಕಾಶ ಕಡಿಮೆ. ಪ್ಲಾಸ್ಟಿಕ್ ಜರಿ ಹಾಗೂ ಚಮಕ ಬಳಕೆಗೆ ಬಂದ ಮೇಲೆ ಮಾರುಕಟ್ಟೆಯಲ್ಲಿ ಸೀರೆಗಳು ಹೆಚ್ಚು ಆಕರ್ಷಣೀಯವಾಗಿವೆ. ಆದರೆ ಇವುಗಳ ತಾಳಿಕೆ ಹಾಗೂ ಗುಣಮಟ್ಟದ ಬಗ್ಗೆ ಯಾವುದೇ ಗ್ಯಾರಂಟಿ ಇಲ್ಲ. 'ದಟ್ಟಿ' ಎಂಬ ಬಾಲಿಕೆಯರು ಉಡುವ ಸೀರೆ ಈಗ ಮಾಯವಾಗಿದೆ. ಬಾಲಿಕೆ ಋತುಮತಿಯಾದಾಗ ದಟ್ಟಿ ಉಡಿಸಿದೆವು ಎಂದರೆ ಕನ್ಯಾ ನಿಶ್ಚಯವಾಯಿತು ಎಂದು ಅರ್ಥ. ಮಹಾರಾಷ್ಟ್ರದ ತಮಾಶಾ ಜಾನಪದರು ತಮ್ಮ ಬಾಳೆ ದಿಂಡಿನಂತಹ ದೇಹ ಸಿರಿಯಲ್ಲಿ ಇಲಕಲ್ಲ ಸೀರೆಯ ಸೆರಗಿನ ಚುಂಗನ್ನು ಎರಡೂ ಕೈಗಳಿಂದ ಎತ್ತಿ ನರ್ತಿಸುವಾಗ ಅರಸಿಕನೂ ಕಲಾರಾಧಕನಾಗಿ ಬಿಡುತ್ತಾನೆ. ಇಳಕಲ್ಲ ಸೀರೆಯ ಸೊಗಸನ್ನು ವಿಕ್ರಮ ವಿಸಾಜಿಯವರ 'ತಮಾಷಾ' ಕವನದಲ್ಲಿ ಕಾಣಬಹುದು.

"ದುಂಡನೆಯ ಮೂಗತಿ (ಇಳಕಲ್ಲ) ಸೀರೆಯ ಕಚ್ಚಿ.....
ಎದೆಯೊಳಗೆಲ್ಲ ಮಿಡಿನಾಗರಗಳಾಗಿ ಹರಿದಾಡಿ
ಯೌವ್ವನದ ಹುಚ್ಚಿಗೆ ಮತ್ತಷ್ಟು ಕಿಚ್ಚಿಡುತ್ತವೆ"
(ಇಳಕಲ್ಲ ಶಬ್ದ ಜೋಡಿಸಿದೆ)

ಈಗಾಗಲೇ ಹೇಳಿದಂತೆ ಕೃಷಿಯಿಂದ ಹತ್ತಿ ಉತ್ಪಾದನೆಯಾಗುತ್ತದೆ. ಈಗ ವಿವಿಧ ನಂಬರಿನ ನೂಲು ಗಿರಣಿಯಿಂದಲೇ ಸಿದ್ಧವಾಗುತ್ತದೆ. ಉದ್ದಿಮೆದಾರರು ನೂಲು, ರೇಷ್ಮೆ, ಚಮಕಾಗಳನ್ನು ವಿಶಾಲ ಮಾರುಕಟ್ಟೆಯಲ್ಲಿ ಖರೀದಿಸುತ್ತಾರೆ. ನೂಲಿಗೆ ಬಣ್ಣ ಹಾಕುವುದು ಮೊದಲ ಹಂತದ ಕೆಲಸ. ಬಣ್ಣದ ಮನೆಗೆ 'ಕೇಲ' ಮನೆ ಎಂದು ಕರೆಯುತ್ತಾರೆ. ಕ್ರೈಸ್ತರ ಶಿಲುಬೆ ಆಕಾರದ ಕಟ್ಟಿಗೆಯನ್ನು ನೆಲದಲ್ಲಿ ಹೂತಿರುತ್ತಾರೆ. ಮಣ್ಣಿನ ಬಾನಿ (ಗ್ವಾಲ್ಮಿ)ಯಲ್ಲಿ ಬಣ್ಣ ಎದ್ದಿ, ಬಣ್ಣ ಜಾಡಿಸುವ ಸಾಧನದಿಂದ ಲಡಿಯಲ್ಲಿಯ ಬಣ್ಣದ ನೀರಿನ ಅಂಶವನ್ನು ಹಿಂಡುತ್ತಾರೆ. ಮತ್ತೆ ಮುಂಗೈಗೆ ಹಾಕಿಕೊಂಡು ಲಡಿಯನ್ನು ಎಳೆಎಳೆಯಾಗಿ ಬಿಡಿಸ ಒಣಗಿಸುತ್ತಾರೆ. ಒಂದು ಕಿಲೊ ನೂಲಿಗೆ ಬಣ್ಣ ಹಾಕಲು ಸುಮಾರು ರೂ. ೨೦ ಮಜೂರಿ ಇದೆ. ರೇಷ್ಮೆ ಹಾಗೂ ಚಮಕಾಗಳಿಗೆ ಅನುಕ್ರಮವಾಗಿ ರೂ. ೫೦ ಹಾಗೂ ರೂ. ೧೫ ಇದೆ. ಬಣ್ಣ ಪಡೆದುಕೊಂಡು ಎಳೆಗಳನ್ನು ತೋಡುವ, ಹಾಸು ಹೊಯ್ಯುವ, ಕೆಚ್ಚುವ, ಕಾಂಡಕಿ ಲಾಳಿ ಸುತ್ತುವ, ಮಗ್ಗಕ್ಕೆ ಏರಿಸಿ ನೇಯುವ ಕೆಲಸಗಳು ಜರಗುತ್ತವೆ. ನೂಲು ತೋಡುವುದಕ್ಕೆ ಈಗ ವೈಂಡರ ಎಂಬ ಹೊಸ ಸಾಧನ ಬಂದಿದೆ. ಮೊದಲು ರಾಟ್ಯಾಳಕ್ಕೆ ತೊಡೆಯ ಮೇಲಿಟ್ಟು ನೂಲು ತೊಡುತ್ತಿದ್ದರು. ತೊಡೆಯ ಚರ್ಮ ಸುಕ್ಕುಗಟ್ಟಿ ಕಲೆ ಬೀಳುತ್ತಿತ್ತು. ನೂಲು ತೋಡುವ ಕೆಲಸವನ್ನು ಬೇರೆ ಶ್ರಮ ನಿರ್ವಹಿಸಲಾರದ ಮುದುಕರು ಅಥವ ಬಾಲಕರು ಜರುಗಿಸುವ ಸಾಧ್ಯತೆ ಹೆಚ್ಚು. ಚಮಕಾ ಹಾಗೂ ರೇಷ್ಮೆ ತೋಡಲು ಹಾಗೂ ಟಾಣ ಹಾಕಲು ೧೦೦ಗ್ರಾಂಗೆ ರೂ. ೧೦ ಮಜೂರಿ ಇದೆ. ಟಾಣ ಹಾಕುವದು ಹೆಚ್ಚು ನೈಪುಣ್ಯತೆ ಅಪೇಕ್ಷಿಸುವ ಕೆಲಸವಾಗಿರಬಹುದು. ಏಕೆಂದರೆ ಹಿರಿಯ ನೇಕಾರರು 'ಈಗಿನವರಿಗೆ ಸರಿಯಾಗಿ ಟಾಣ ಹಾಕಲು, ಕೊಯ್ಯಲು ಬರುವುದಿಲ್ಲ' ಎಂದು ಮಾತಿಗೊಮ್ಮೆ ಹಂಗಿಸುತ್ತಾರೆ. ರೇಷ್ಮೆ ಹಾಗೂ ಚಮಕಾ ಕೆಚ್ಚುವ ಕೆಲಸಕ್ಕೆ ೧೦೦ಗ್ರಾಂಗೆ ಅನುಕ್ರಮವಾಗಿ ರೂ. ೧೫ ಹಾಗೂ ರೂ. ೧೦ ಇದೆ. ಕೆಚ್ಚುವ ಕೆಲಸವನ್ನು ಹೆಚ್ಚಾಗಿ ಮಹಿಳೆಯರೇ ನಿರ್ವಹಿಸುತ್ತಾರೆ. ಹಾಸು ಹಾಕುವಲ್ಲಿ ಎರಡು ವಿಧಗಳಿವೆ. ಉದಾಹರಣೆಯಾಗಿ ಗೋಡಿಹರಿ ಹಾಗು ಕೈಹರಿ, ಇದಕ್ಕೆ ಡೋಲಿ ಮಾಡುವದೆಂದು ಕರೆಯುತ್ತಾರೆ. ಆರುವಾರ ಎಂಟುವಾರ, ಸೀರೆಗಳನ್ನು ನೇಯಲು ಬೇರೆ ಬೇರೆ ಮಜೂರಿಗಳಿವೆ.

ಒಂದು ದಿನದಲ್ಲಿ ಚಮಕಾ ಸೀರೆ ನೇಯಬಹುದು. ರೇಷ್ಮೆಗೆ ಎರಡು ಮೂರು ದಿನಗಳು ಬೇಕಾಗುತ್ತವೆ. ಚಮಕಾ ಸೀರೆಯ ಮಜೂರಿ ರೂ. ೩೦ ರಿಂದ ರೂ. ೫೦ ಇದ್ದರೆ, ರೇಷ್ಮೆಗೆ ರೂ. ೫೦ ರಿಂದ ರೂ. ೯೦ ಇದೆ. ಸೀರೆಯ ಉದ್ದ ಹಾಗೂ ವಿನ್ಯಾಸದ ಮೇಲೆ ಮಜೂರಿಯಲ್ಲಿ ವ್ಯತ್ಯಾಸವಾಗಬಹುದು. ಒಟ್ಟಿಗೆ ಒಬ್ಬ ನೇಕಾರ ಈಗ ದಿನಕ್ಕೆ ರೂ. ೫೦ ದುಡಿಯುವ ಸಾಧ್ಯತೆ ಇದೆ.

ಸೀರೆಗಳ ಅಂದವನ್ನು ಹೆಚ್ಚಿಸಲು ಸೆರಗಿಗೆ ಗೊಂಡೆ ಕಟ್ಟುವ ಹಾಗೂ ಕಸೂತಿ ಹಾಕುವ ಕೆಲಸಗಳು ಇವೆ. ಸೆರಗಿನಲ್ಲಿ ಕೊನೆಗೆ ಇರುವ (ಕರಿ) ಎಳೆಗಳನ್ನು ಕ್ರಾಸ್ ಮೇಲೆ ಕಟ್ಟುವುದಕ್ಕೆ ಗೊಂಡೆ ಕಟ್ಟುವುದು ಎಂದು ಹೇಳುತ್ತಾರೆ. ಚಮಕಾ ಸೀರೆಗಳಿಗೆ ಎರಡು ಕ್ರಾಸ್ ಗಂಟು ಹಾಕಿದರೆ ರೂ ೧; ರೇಷ್ಮೆ ಸೀರೆಗೆ ಒಂದು ಕ್ರಾಸ್ ಗಂಟಿಗೆ ರೂ ೧ ಕೂಲಿ ಇದೆ. ಸೆರಗಿನ ಅಗಲದ ಆಧಾರದ ಮೇಲೆ ಗಂಟುಗಳ ಪ್ರಮಾಣ ಇರುತ್ತದೆ. ಹೆಣ್ಣುಮಕ್ಕಳು ಗೊಂಡೆ ಕಟ್ಟುವ ಕೆಲಸದಲ್ಲಿ ದಿನಕ್ಕೆ ರೂ. ೨೦ ರಿಂದ ರೂ. ೨೫ ಸರಳವಾಗಿ ಗಳಿಸುತ್ತಾರೆ. ರೇಷ್ಮೆ ಸೀರೆಗೆ ವಿಶೇಷ ಕಸೂತಿ ಹಾಕಿಸುತ್ತಾರೆ. ಇದರ ಕೂಲಿ ದರ ವಿಚಿತ್ರವಾಗಿದೆ. ಸೂಜಿಯಲ್ಲಿರುವ ದಾರವನ್ನು ಒಮ್ಮೆ ಚುಚ್ಚಿ ಮೇಲೆಳೆದರೆ ಒಂದು ಪೈಸೆ ಮಜೂರಿ. ಕಸೂತಿಯ ವಿನ್ಯಾಸದ ಮೇಲೆ ಇದರ ದರ ಅವಲಂಬನೆ ಆಗುತ್ತದೆ.

ಸಿದ್ಧವಾದ ಸೀರೆಗಳನ್ನು ಮಾರುವ ವ್ಯಾಪಾರಸ್ಥ ವರ್ಷದಲ್ಲಿ ಎರಡು ಕಾಲ ಗುರುತಿಸಿಕೊಂಡಿದ್ದಾನೆ. ಒಂದು ಸೀಸನ್ ಇನ್ನೊಂದು ಬಿನ್ ಸೀಸನ್ ಕಾಲ. ಜೇಷ್ಠ, ಆಷಾಢ ಶ್ರಾವಣ, ಭಾದ್ರಪದ ಮಾಸಗಳು ಬಿನ್ ಸೀಸನ್‌ಗಳಾಗಿದ್ದರೆ, ಕಾರ್ತೀಕ ಮಾಸದ ನಂತರ ಸೀಸನ್ ಪ್ರಾರಂಭವಾಗುತ್ತದೆ. ಮೊದಮೊದಲು ಇಡೀ ವರ್ಷ ಸೀರೆಗಳನ್ನು ನೇಯಿಸಿ ಸಂಗ್ರಹಿಸಿ ವರ್ಷದಲ್ಲಿ ಮೂರು ತಿಂಗಳು ಮಾತ್ರ ವ್ಯಾಪಾರ ಮಾಡುವ ಕಾಲ ಇತ್ತು. ಈಗ ವರ್ಷದುದ್ದಕ್ಕೂ ಹೆಚ್ಚು ಕಡಿಮೆ ವ್ಯಾಪಾರ ಜರುಗುತ್ತಲೆ ಇರುತ್ತದೆ ಎಂದು ಕೆಲವರು ಹೇಳುತ್ತಾರೆ. ಇಲಕಲ್ಲ ಸೀರೆ ಉದ್ಯಮದಲ್ಲಿ ಬಿಳೆ ಕುದರಿ, ಧೋತ್ರೆ, ಗುಳೇದದಟ್ಟಿ, ಕಾಳಗಿ, ಸಪ್ಪರದ ಮನೆತನಗಳು ಒಂದು ಕಾಲಕ್ಕೆ ಪ್ರಸಿದ್ಧವಾಗಿದ್ದವು ಎಂದು ಹೇಳುತ್ತಾರೆ. ಇತ್ತೀಚೆಗೆ ಮಾರ್ವಾಡಿಗಳು ಈ ಉದ್ಯಮದಲ್ಲಿ ಪ್ರವೇಶ ಪಡೆದಿದ್ದಾರೆ. ಉದ್ಯಮಶೀಲರಾದ ಇವರು ತೇಜಿ ಮಂದಿ ಮಾಡುವುದರಲ್ಲಿ ನಿಪುಣರೆಂದು ಹಾಗೂ ವಲಸೆ ಪ್ರಿಯರೆಂಬ ಖ್ಯಾತಿ ಇದೆ. "ಚಕ್ಕಡಿ ಹೋಗದ ಜಾಗದಲ್ಲಿ ಮಾರ್ವಾಡಿ ಹೋಗಿರುತ್ತಾನೆ" ಎಂಬ ಗಾದೆ ಇದೆ. ಆದರೆ ಮಾರ್ವಾಡಿಗಳು ಸೀರೆಯ ಉತ್ಪಾದನೆಯಲ್ಲಿ ತೊಡಗಿದ್ದು ಕಡಿಮೆ. ಅದರ ವ್ಯಾಪಾರದಲ್ಲಿ ತೊಡಗಿದ್ದಾರೆ. ಇಲಕಲ್ಲ ಸೀರೆ 'ದೇಶಿ' ಪರಂಪರೆಯ ಸಂಕೇತವಾಗಿ ಒಂದು ಮನೆತನದ ನೆನಪುಗಳ ಖಜಾನೆಯಾಗಿ ಉಳಿಯುತ್ತದೆ. ಏಕೆಂದರೆ ಹಳೆಯ ಬಣ್ಣ ಮಾಸದ ಸೀರೆ, ಕುಲಾಯಿ, ಕುಂಚಿಗೆ, ಕೌದಿಯಾಗಿ ರೂಪಾಂತರ ಪಡೆಯುತ್ತದೆ.

ಸೀರೆ ಉತ್ಪಾದಿಸುವ ಕ್ರಮದಲ್ಲಿ ನಾಲ್ಕು ಪದ್ಧತಿಗಳಿವೆ. ಮುಂಗಡ, ಸಟ್ಟಾ, ರೋಖಡಾ ಹಾಗೂ ಕೂಲಿ. ಮುಂಗಡ ಎಂದರೆ ನೇಕಾರ ಹತ್ತು ಸೀರೆಗೆ ಬೇಕಾಗುವ ಕಚ್ಚಾ ಮಾಲನ್ನು (ಬಣ್ಣಾ ಹಾಕಿದ ನೂಲು, ರೇಷ್ಮೆ, ಚಮಕಾ ಇತ್ಯಾದಿ) ಹಾಗೂ ಖರ್ಚು ಒಯ್ಯುತ್ತಾನೆ. ನೂಲನ್ನು ಸೀರೆಯಾಗಿ ರೂಪಾಂತರಿಸಿ ಮುಂಗಡ ಕೊಟ್ಟ ಉದ್ದಿಮೆದಾರನಿಗೆ ಮರಳಿಸಿ ತನ್ನ ಮಜೂರಿ ಪಡೆಯುತ್ತಾನೆ. ಹತ್ತು ಸೀರೆಯ ಮುಂಗಡದಲ್ಲಿ ಹನ್ನೊಂದು ಸೀರೆಯಾಗುವ ಕಚ್ಚಾ ನೂಲು ಇರುತ್ತದೆ. ಈ ಹನ್ನೊಂದನೆಯ ಸೀರೆ ನೇಕಾರನಿಗೆ ಬೋನಸ್ ಅಥವ ಪ್ರೋತ್ಸಾಹಧನವಾಗುತ್ತದೆ. ಸಟ್ಟಾ ಎಂದರೆ ಮಾರುಕಟ್ಟೆಯ ಪ್ರಚಲಿತ ದರದಲ್ಲಿ ನೇಕಾರ ಉದ್ದಿಮೆದಾರನಿಂದ ಕಚ್ಚಾ ಮಾಲು ಪಡೆಯುತ್ತಾನೆ. ಸೀರೆ ಸಿದ್ಧವಾದ ಮೇಲೆ ಪ್ರಚಲಿತ

ದರದಲ್ಲಿ ಉದ್ದಿಮೆದಾರನಿಗೆ ಸೀರೆ ಮಾರುತ್ತಾನೆ. ಇದು ಒಂದು ರೀತಿ ಜೂಜಾಟ ಇದ್ದಂತೆ. ಮಾರುಕಟ್ಟೆಯ ಏರಿಳಿತ ಒಮ್ಮೊಮ್ಮೆ ಬಡನೇಕಾರನ ಬೆನ್ನೆಲುಬನ್ನೇ ಮುರಿಯುತ್ತದೆ. ರೋಖಡಾ ನೇಕಾರ ತನಗೆ ಬೇಕಾಗುವ ಕಚ್ಚಾ ಮಾಲನ್ನು ಎಲ್ಲಿಯಾದರೂ ಕೊಳ್ಳಬಹುದು. ಸಿದ್ಧವಾದ ಸೀರೆಗಳನ್ನು ಎಲ್ಲಿಯಾದರೂ ಮಾರಬಹುದು. ಕೂಲಿ ಪದ್ಧತಿ ಎಂದರೆ ಉದ್ದಿಮೆದಾರ ಹತ್ತೆಂಟು ಮಗ್ಗ ಹೊಂದಿರುತ್ತಾನೆ; ನೇಕಾರ ಅಲ್ಲಿಗೆ ಹೋಗಿ ತನ್ನ ಶ್ರಮ ಪೂರೈಸಿ ಮಜೂರಿ ಪಡೆಯುತ್ತಾನೆ. ಕೂಲಿ ಪದ್ಧತಿಯಲ್ಲಿ ವ್ಯಕ್ತಿ ಸ್ವಾತಂತ್ಯ್ರ ಇದೆ ಎಂದು ಹೇಳಬಹುದು. ಆದರೆ ಬಡತನವನ್ನು ಬೆನ್ನಿಗೆ ಕಟ್ಟಿಕೊಂಡ ನೇಕಾರ ಯಾವಾಗಲೂ ಸಾಲದ ಶೂಲದಲ್ಲಿರುತ್ತಾನೆ. ಕಾಲಾನುಕ್ರಮದಲ್ಲಿ ಕೂಲಿ ಪದ್ಧತಿ ಜೀತದ ರೂಪತಾಳುವ ಸಾಧ್ಯತೆ ಇದೆ. ಸಣ್ಣ ಉದ್ದಿಮೆದಾರನೂ ಇಲ್ಲಿ 'ಧನಿ' ಸಂಸ್ಕೃತಿಗೆ ಅಂಕುರ ಹಾಕುತ್ತಾನೆ.

ಇಲಕಲ್ಲ ಸೀರೆಯ ಉತ್ಪಾದನೆ ಗೃಹ ಕೈಗಾರಿಕೆಯಾಗಿರುವುದರಿಂದ ಹೆಚ್ಚು ಮಾನವಶ್ರಮ ಅಪೇಕ್ಷಿಸುತ್ತದೆ. ಅಲ್ಲದೆ ಇದು ಮನೆಮಂದಿಗೆಲ್ಲ ಕೆಲಸ ಒದಗಿಸುತ್ತದೆ. ಈ ವೃತ್ತಿಯಲ್ಲಿ ತೊಡಗಿದ ಕುಟುಂಬದಲ್ಲಿ ನಿತ್ಯವು ಹಣದ ಚಲಾವಣೆ ಇರುತ್ತದೆ. ಹೀಗಾಗಿ ನೇಕಾರ ನಿತ್ಯವೂ ಮಾರುಕಟ್ಟೆಯಲ್ಲಿ ಪ್ರವೇಶ ಪಡೆಯುವ ಅವಕಾಶ ಪಡೆದಿದ್ದಾನೆ. ಆದ್ದರಿಂದಲೆ ಹೆಚ್ಚು ನೇಕಾರಿಕೆ ಇದ್ದ ಪ್ರದೇಶದಲ್ಲಿ ನಿತ್ಯ ಉಪಭೋಗದ ವಸ್ತುಗಳ ಮಾರುಕಟ್ಟೆ ಹೆಚ್ಚು ಬೆಳೆಯುವ ಸಾಧ್ಯತೆ ಇದೆ.

(೩)

**ಇಲಕಲ್ಲ ಸೀರೆ ಭವಿಷ್ಯ**

ಜವಳಿಕ್ಷೇತ್ರ ಇಂದು ಒಂದು ಉದ್ಯಮವಾಗಿ ಅಂತರರಾಷ್ಟ್ರೀಯ ಜಾಲ ಹೊಂದಿದೆ. ಸಮೂಹ ಸಂಪರ್ಕ ಮಾಧ್ಯಮಗಳ ಪ್ರಭಾವ, ಕ್ಷಣಕ್ಷಣಕ್ಕೂ ಬದಲಾಗುವ, ಫ್ಯಾಶನ್, ವೃತ್ತಿಯಲ್ಲಿ ಆಧುನಿಕತೆ, ಕಂಪ್ಯೂಟರನಿಂದ ಬಟ್ಟೆ ವಿನ್ಯಾಸ ಹಾಗೂ ಬಣ್ಣಗಳ ಹೊಂದಾಣಿಕೆ ಮಾಡುವ ಸಂದರ್ಭ ಮುಂತಾದವುಗಳು ಜವಳಿ ಕ್ಷೇತ್ರದಲ್ಲಿ ಮಿಂಚಿನ ವೇಗದ ಬದಲಾವಣೆ ತರತೊಡಗಿವೆ. ಇಂದು ಬಟ್ಟೆಗಳನ್ನು ಕೊಂಡು ಹೊಲಿಸುವುದಕ್ಕಿಂತ, ಮಾರುಕಟ್ಟೆಯಲ್ಲಿ ಸಿದ್ಧ ಉಡುಪುಗಳೇ ಗ್ರಾಹಕರನ್ನು ತಣಿಸುವ ಆಕರ್ಷಿಸುವ ಗುಣ ಪಡೆದುಕೊಂಡಿವೆ. 'ನೈಟಿ' 'ಚೂಡಿದಾರ' ಸಾರ್ವತ್ರೀಕರಣ ಹೊಂದ ತೊಡಗಿವೆ. ಶಾಪುರ ಪತ್ತಲ, ಸಿಂಥೆಟಿಕ್ ಸೀರೆ ಜನಪ್ರಿಯವಾಗತೊಡಗಿವೆ. ಕೊಂಕುಳ ತಿರುವಿದ ಕುಬಸ, ಇಲಕಲ್ಲ ಸೀರೆ ಉಡುವವರ ಸಂಖ್ಯೆ ಕಡಿಮೆಯಾಗತೊಡಗಿದೆ. ಅರವತ್ತು ದಾಟಿದ ವೃದ್ಧ ಮುದುಕಿ ನಿಧನ ಹೊಂದಿದರೆ ಇಲಕಲ್ಲ ಸೀರಿ ಒಬ್ಬ ಗಿರಾಕಿಯನ್ನು ಕಳೆದುಕೊಂಡಂತೆ. ಎಲ್ಲ ಕ್ಷೇತ್ರಗಳಲ್ಲಿ ದೇಸಿ ಪರಂಪರೆ ಕ್ಷೀಣಿಸುತ್ತಿರುವಂತೆ ಉಡುಗೆಗಳ ಕ್ಷೇತ್ರದಲ್ಲಿಯು ದೇಸಿ ಸಂಕೇತವಾದ ಕೈಮಗ್ಗಗಳ ಉತ್ಪಾದನೆ ಹಲವು ಸಮಸ್ಯೆಗಳನ್ನು ಎದುರಿಸತೊಡಗಿವೆ. ಈಗ ನಮ್ಮ ಮುಂದೆ ಇರುವ ಪ್ರಶ್ನೆ ಇಡೀ ಜವಳಿ ಉದ್ಯಮದ ಸಮಸ್ಯೆಯಲ್ಲ, ಇಲಕಲ್ಲ ಸೀರೆ ಹಾಗೂ ಅದನ್ನು ಉತ್ಪಾದಿಸುವ ನೇಕಾರನ ಭವಿಷ್ಯ ಏನು ಎಂಬುದು ಮಾತ್ರ.

ಇಲಕಲ್ಲ ಕೈಮಗ್ಗ ಸೀರೆಯ ಭವಿಷ್ಯದ ಬಗ್ಗೆ ಮಿಶ್ರ ಪ್ರತಿಕ್ರಿಯೆ ಇದೆ. ನೇಕಾರ ಹಾಗೂ ಉದ್ದಿಮೆದಾರರು ಆಶಾವಾದಿಗಳಾಗಿಯೇ ಇದ್ದಾರೆ. ಆದರೆ ಕೈಮಗ್ಗ ಅಭಿವೃದ್ಧಿ ನಿಗಮ ಹಾಗೂ ಇತರ ಸೋದರ ಸಂಸ್ಥೆಗಳ ಸಿಬ್ಬಂದಿ ಈ ಉದ್ಯಮದ ಭವಿಷ್ಯದ ಬಗ್ಗೆ ನಿರಾಶಾವಾದಿಗಳಾಗಿದ್ದಾರೆ. ಬಹುಶಃ ಖಾಸಗಿ ಹಾಗೂ ಸಾರ್ವಜನಿಕ ವಲಯದ ಉದ್ಯಮಗಳ ಸೋಲು ಗೆಲುವುಗಳ ಕಾರಣಗಳೆ ಇಲ್ಲಿ ಅನ್ವಯವಾಗಬಹುದು. ಖಾಸಗಿ ಉದ್ದಿಮೆದಾರನ ಆತಂಕಗಳೆಂದರೆ ನೇಯುವವರ ಸಂಖ್ಯೆ ಕಡಿಮೆಯಾಗುತ್ತಿರುವುದು, ಗುಣಮಟ್ಟದ ಸಮಸ್ಯೆ, ಸರಕಾರ ದಿಢೀರ ಘೋಷಿಸುವ ಜವಳಿನೀತಿ ಮುಂತಾದವುಗಳಾಗಿವೆ. ಆಧುನಿಕ ಲಮಹಿಳೆಯು ಕೈಮಗ್ಗದ ಇಲಕಲ್ಲ ಸೀರೆಯತ್ತ ಆಕರ್ಷಿತಳಾಗುವಂತೆ ಮಾರ್ಪಾಡು ತರಬೇಕಾಗಿದೆ.

ಇಲಕಲ್ಲಿನಲ್ಲಿ ಸುಮಾರು ಎಂಟು ನೇಕಾರಿ ಸಹಕಾರಿ ಸಂಘಗಳಿವೆ. ನೇಕಾರ ಉಪಜಾತಿಗಳ ಪಡಿನೆಳಲಾಗಿ ಇವು ಹುಟ್ಟಿಕೊಂಡಿವೆ. ಸಾಮೂಹಿಕ ಜವಾಬ್ದಾರಿ, ಸಾಮೂಹಿಕ ಪಾಲ್ಗೊಳ್ಳುವಿಕೆ, ಲಾಭಾಂಶದ ಸಮಾನ ವಿತರಣೆ ಹಾಗೂ ಸದಸ್ಯರ ಹಿತರಕ್ಷಣೆ ಸಹಕರಿ ಸಂಘಗಳ ಹಲವು ಉದ್ದೇಶಗಳಲ್ಲಿ ಕೆಲವಾಗಿದೆ. ಭಾರತದಲ್ಲಿ ಸಹಕಾರಿ ಆಂದೋಲನ ಸೋತಿರುವಂತೆ ಇಲ್ಲಿಯೂ ಸೋತಿದೆ. ಆದರೂ ಕೆಲವು ಹೊರತಾದ ಉದಾಹರಣಗಳಿವೆ. ಇಲಕಲ್ಲಿನ ದೊಡ್ಡ ಪ್ರಮಾಣದ ನೇಕಾರ ಸಂಘ ಇದ್ದುದರಲ್ಲಿಯೇ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಹುನಗುಂದ ತಾಲೂಕಿನ ಸೂಳೆಭಾವಿ ಗ್ರಾಮದ ಶಾಖಾಂಬರಿ ಸಹಕಾರಿ ಸಂಘ ಇತ್ತೀಚೆಗೆ ತನ್ನ ಸುವರ್ಣ ಮಹೋತ್ಸವ ಆಚರಿಸಿಕೊಂಡು ಯಶಸ್ಸಿನ ಮೆಟ್ಟಿಲೇರಿದೆ. ತಮಿಳುನಾಡಿನ ಚೆನ್ನಿಮಲೈ ಕೈಮಗ್ಗ ಸಹಕಾರಿ ಸಮಘ, ವಿಧಾನಸೌಧ ನಾಚಿಸುವ ಭವ್ಯ ಕಟ್ಟಡ ಹೊಂದಿದೆಯಂತೆ.

ನೇಕಾರನನ್ನು ದುಸ್ಥಿತಿಯಿಂದ ಸುಸ್ಥಿತಿಗೆ ತರಲು ಯತ್ನಿಸುವ ಸಂಸ್ಥೆ ಕೈಮಗ್ಗ ಅಭಿವೃದ್ಧಿ ನಿಗಮವಾಗಿದೆ. ಇಲಕಲ್ಲದಲ್ಲಿ ಇದರ ಯೋಜನಾ ಕಚೇರಿ ಇದೆ. ಇದರ ಪ್ರಧಾನ ಆಡಳಿತ ಕಚೇರಿ ಬೆಂಗಳೂರಿನಿಂದ ಹುಬ್ಬಳ್ಳಿಗೆ ಇತ್ತೀಚೆಗೆ ವರ್ಗಾಯಿಸಲ್ಪಟ್ಟಿದೆ. ಬಹುಶಃ ಕೈಮಗ್ಗದ ಉದ್ದಿಮೆ ಉತ್ತರ ಕರ್ನಾಟಕದಲ್ಲಿ ಹೆಚ್ಚು ಇರುವದು ಇದಕ್ಕೆ ಕಾರಣವಿರಬಹುದು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ತನ್ನದೇ ಆದ ಹಲವು ಆದರ್ಶ ಉದ್ದೇಶಗಳನ್ನು ಹೊಂದಿದೆ. ಒಂದು ತೆರನಾದ 'ಜೀತ' ಪದ್ಧತಿ ನೇಕಾರಿಕೆಯಲ್ಲಿ ಬೆಳೆದು ಇದು 'ಧಣಿ' ಸಂಸ್ಕೃತಿಗೆ ಹುಟ್ಟು ಹಾಕಿದೆ. ಆದ್ದರಿಂದ ಇದರ ಮೂಲ ಉದ್ದೇಶ ಖಾಸಗಿ ಶ್ರೀಮಂತ ವ್ಯಕ್ತಿಗಳ ಕುಯುಕ್ತಿಯಿಂದ ಬಡ ನೇಕಾರನನ್ನು ಬಿಡುಗಡೆಗೊಳಿಸುವುದಾಗಿದೆ. ನೇಕಾರನ ಜೀವನಮಟ್ಟ ಸುಧಾರಣೆ, ಹೊಸ ವಿನ್ಯಾಸದ ರಚನೆಗೆ ಪ್ರೋತ್ಸಾಹ, ರಿಯಾಯಿತಿ ದರದಲ್ಲಿ ಮಗ್ಗದ ಸಲಕರಣೆ ನೀಡುವುದು, ಕಡಿಮೆ ಬಡ್ಡಿ ಹಾಗೂ ದೀರ್ಘ ಕಂತುಗಳಲ್ಲಿ ನೇಕಾರನಿಗೆ ಮನೆ ಕಟ್ಟಿಕೊಳ್ಳಲು ಸಹಾಯ, ಹೆರಿಗೆ ಭತ್ತೆ, ಆರೋಗ್ಯ ಬುತ್ತಿ ಯೋಜನೆ, ವರ್ಕ್‌ಷೆಡ್ಡು ಕಟ್ಟಿಸಿಕೊಳ್ಳಲು ಅನುದಾನ, ಶೈಕ್ಷಣಿಕ ಪ್ರವಾಸ ಹಮ್ಮಿಕೊಳ್ಳುವುದು ಹೀಗೆ ಹತ್ತು ಹಲವು ಉದ್ದೇಶಗಳನ್ನು ಹೊಂದಿದೆ. ಇಲಕಲ್ಲಿನ ಉತ್ಪಾದನೆ ಶಾಖೆ ಇಲಕಲ್ಲ, ಅಮೀನಗಡ, ಕಮತಗಿ, ಗುಳೇದಗುಡ್ಡ, ಬಾದಾಮಿ, ಕಂಕಣಕೊಪ್ಪ, ಕೆರೂರು, ಬೀಳಗಿ, ನಾಗರಾಳ, ಗಿರಿಸಾಗರ, ಹವೇಲಿ, ನಿಡಗುಂದಿ, ವಂದಾಲ,

ಗೊಳಸಂಗಿ, ಬೇನಾಳ, ಮುದ್ದೇಬಿಹಾಳ, ಕೋಡಿಹಾಳ, ದೋಟಿಹಾಳ, ಬಸರಕೋಡ, ನಾಲತ್ವಾಡ, ಮುಂತಾದ ಸ್ಥಳಗಳಲ್ಲಿ ಉಪಕೇಂದ್ರಗಳನ್ನು ಹೊಂದಿದೆ.

ಕೈಮಗ್ಗ ನಿಗಮ ಅರ್ಹ ನೇಕಾರರನ್ನು ಆಯ್ಕೆ ಮಾಡಿ ರಾಜ್ಯ ಹಣಕಾಸು ಸಂಸ್ಥೆ ಅಥವಾ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ನೇಕಾರನಿಗೆ ಸಾಲ ಒದಗಿಸಲು ನೆರವಾಗುತ್ತದೆ. ಆ ಸಾಲಕ್ಕೆ ನಿಗಮ ಜಾಮೀನು ನೀಡುತ್ತದೆ. ತನ್ಮೂಲಕ ನೇಕಾರ ನಿಗಮದ ಸದಸ್ಯನಾದಂತೆ. ನಿಗಮ ಕೇವಲ ಇಲಕಲ್ಲ ಸೀರೆಗಳಲ್ಲದೆ, ಹಲವು ಭಿನ್ನ ಕೈಮಗ್ಗದ ಬಟ್ಟೆಗಳನ್ನು ಉತ್ಪಾದಿಸುತ್ತದೆ. ಜನತಾ ಸೀರೆ, ಧೋತರ ಇದರ ಪ್ರಮುಖ ಉತ್ಪಾದನೆಗಳಾಗಿವೆ. ಪಾಲಿಸ್ಟರ್ ಸೀರೆ, ಅಂಗಿ ಬಟ್ಟೆ, ಗಾದಿ-ಮೇಲ ಹೊದಿಕೆ, ಟವೆಲ್, ಗದ್ವಾಲ್ ಸೀರೆ, ಬೆಂಗಾಲ ಸೀರೆ ಮುಂತಾದವುಗಳನ್ನು ಉತ್ಪಾದಿಸುತ್ತವೆ. ಇಲ್ಲಿ ಉತ್ಪಾದನೆ ವಿಭಾಗ ಇರುವಂತೆ ಮಾರಾಟದ ವಿಭಾಗವೂ ಇದೆ. ಉತ್ಪಾದನ ವೆಚ್ಚ ಹಾಗೂ ಇತರ ಬಾಬುಗಳ ಲೆಕ್ಕಹಾಕಿ ಮಾರಾಟ ದರ ನಿಗದಿ ಮಾಡುತ್ತಾರೆ. ಆದರೂ ಕೈಮಗ್ಗದ ಬಟ್ಟೆ ಒಮ್ಮೊಮ್ಮೆ ಉಳ್ಳವರ ಲಕ್ಷುರಿ ಆಗುತ್ತದೆ. ಇಲ್ಲಿ ಲಾಭಗಳಿಕೆಗಿಂತ ನೇಕಾರನಿಗೆ ಒದಗಿಸುವ ಸೇವೆ ಸೌಕರ್ಯ ಮುಖ್ಯ ಎಂಬುದು ನಿಗಮದ ಅಂಬೋಣವಾಗಿದೆ. ಆದರೆ ಒಂದು ಕಾಲಕ್ಕೆ ೧೦೦೯ ಸದಸ್ಯ ನೇಕಾರರಿದ್ದ ಇಲಕಲ್ಲ ಉಪಶಾಖೆಯಲ್ಲಿ ಕೇವಲ ೧೦೫ ಸದಸ್ಯರು ಉಳಿದಿದ್ದಾರೆ ಎಂದರೆ ನಿಗಮದ ಕಾರ್ಯಾಚರಣೆ ಊಹಿಸಬಹುದು.

ನಿಗಮ ನೇಕಾರನಿಗೆ ಕುಣಿಮಗ್ಗ ಒದಗಿಸುವ ಸಾಧ್ಯತೆಗಳು ಕಡಿಮೆ. ಫ್ರೇಮ್ ಲೂಮ, ಲಾಳಿ, ತಟ್ಟು, ಚರಕ ಹಾಗೂ ಅದಕ್ಕೆ ಸಂಬಂಧಿಸಿದ ಉಪಕರಣಗಳನ್ನು ಒದಗಿಸುತ್ತದೆ. ಸಾಮಾನ್ಯವಾಗಿ ನಲವತ್ತು ಜೋಡಿ ಧೋತರ ಅಥವಾ ಅರವತ್ತು ಸೀರೆಗಳಿಗಾಗುವ ಕಚ್ಚಾ ಮಾಲನ್ನು, ನೇಕಾರನಿಗೆ ಸಿದ್ಧ ಬೀಮ್ (ಹೊಕ್ಕು ನೂಲ ಸಹಿತ) ಒದಗಿಸುತ್ತದೆ. ಸೀರೆಯ ಉದ್ದ, ಅಗಲ ಹಾಗೂ ವಿನ್ಯಾಸಗಳ ಆಧಾರದ ಮೇಲೆ ಮಜೂರಿ ಕೊಡಲಾಗುತ್ತದೆ. ಒಬ್ಬ ನೇಕಾರ ದಿನಕ್ಕೆ ರೂ. ೫೦ ರಿಂದ ರೂ. ೮೦ರ ವರೆಗೆ ಮಜೂರಿ ಪಡೆಯುವ ಸಾಧ್ಯತೆ ಇದೆ.

ಇಲಕಲ್ಲ ನೇಕಾರ ಖಾಸಗಿ ಧಣಿ, ಸಹಕಾರಿ ಸಂಘ ಹಾಗೂ ನಿಗಮ ಮೂರೂ ಘಟಕಗಳನ್ನು ಅವಲಂಬಿಸಿದ್ದಾನೆ. ಲಾಭ ಹಾಗೂ ಅನುಕೂಲತೆ ಹೆಚ್ಚು ಇರುವಲ್ಲಿ ನೇಕಾರ ಸಂಬಂಧ ಇಟ್ಟುಕೊಂಡಿದ್ದಾನೆ. ಇದರಿಂದಾಗಿ ಖಾಸಗಿ ಉದ್ದಿಮೆದಾರರಿಗೆ, ನಿಗಮಕ್ಕೆ ಹಾಗೂ ಸಹಕಾರಿ ಸಂಘಗಳಿಗೆ ನೇಕಾರನನ್ನು ತಮ್ಮ ನಿಯಂತ್ರಣದಲ್ಲಿಟ್ಟು ಕೊಳ್ಳುವುದು ಪ್ರಯಾಸದ ಕೆಲಸವಾಗಿದೆ. ಖಾಸಗಿ ಉದ್ದಿಮೆದಾರ ಹೇಳುವಂತೆ 'ನಿಗಮ'ಕ್ಕೆ ಲಾಭ ಮುಖ್ಯ ಅಲ್ಲ. ಸರಕಾರದ ರಿಯಾಯಿತಿ ಸೌಲಭ್ಯ ಅದಕ್ಕೆ ಇದೆ. ಇದರಿಂದ ಗುಣಮಟ್ಟ ಉಳಿಸಿಕೊಳ್ಳಲು ಸಾಧ್ಯ ಇಲ್ಲ. ಖಾಸಗಿ ಉದ್ದಿಮೆದಾರರ ನೋವು ಎಂದರೆ ಗುಣಮಟ್ಟ ಉಳಿಸಿಕೊಂಡರೆ ಮಾತ್ರ ಅವರಿಗೆ ಮಾರುಕಟ್ಟೆ ಇದೆ. ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಗುಣಮಟ್ಟ ಉಳಿಸಿಕೊಂಡು ಉದ್ದಿಮೆ ಮುಂದುವರಿಸುವುದು ಕಠಿಣವಾಗಿದೆ ಎಂದು ಹೇಳುತ್ತಾರೆ.

ವಿದ್ಯುತ್ ಮಗ್ಗಗಳು ಬಂದ ಮೇಲೆ ಸೀರೆ ಮಾರುಕಟ್ಟೆ ಸ್ಥಿರತೆ ಕಾಯ್ದುಕೊಂಡಿದೆ. ಸೀರೆಯ ದರದಲ್ಲಿ ಮೊದಲಿನಂತೆ ತೇಜಿಮಂದಿ ಮಾಡುವ ಸಾಧ್ಯತೆ ಕಡಿಮೆ. ಗುಣಮಟ್ಟ ಕಾಯ್ದುಕೊಂಡರೆ ಮಾತ್ರ ಇಲಕಲ್ಲ ಕೈಮಗ್ಗದ ಸೀರೆಗೆ ಭವಿಷ್ಯ ಇದೆ. ನೂಲಿನ, ರೇಷ್ಮೆಯ ಮಾರುಕಟ್ಟೆಯ ದರ ಏರಿಳಿತ ಉದ್ದಿಮೆದಾರನನ್ನು ಅಷ್ಟೊಂದು ಪೀಡಿಸಿದಂತೆ ಕಾಣುವುದಿಲ್ಲ.

ಏಕೆಂದರೆ ಇತ್ತೀಚಿನ ರೇಷ್ಮೆಯ ಆಮದು ನೀತಿಯ ಬಗ್ಗೆಯೂ ನೇಕಾರ, ವ್ಯಾಪಾರಸ್ಥ ತಲೆ ಕೆಡಿಸಿಕೊಂಡಂಥೆ ಕಾಣುವುದಿಲ್ಲ. ಏಕೆಂದರೆ ಎಳ್ಳಿನಂತೆ ಎಣ್ಣೆ ದರ ನಿಗದಿಯಾಗುತ್ತದೆ ಎಂದು ಅವರ ಅಂಬೋಣ. ನೂಲು ಹಾಗೂ ಬಾಂಬರ, ಚಮಕ ಹಾಗೂ ರೇಷ್ಮೆಗಳನ್ನು ಗುರುತಿಸುವಲ್ಲಿ ಸಾಮಾನ್ಯ ಗ್ರಾಹಕ ಮೋಸ ಹೋಗುವ ಸಾಧ್ಯತೆ ಹೆಚ್ಚು ಇದೆ.

ಇಲಕಲ್ಲ ಸೀರೆಗೆ ವಿಶೇಷ ಮಾರುಕಟ್ಟೆ ಇರುವುದೇ ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ. ಮೂಗುತಿ, ಕುಂಕುಮ ಬಳೆ ಮುಂತಾದವುಗಳು ಮುತ್ತೈದೆಯ ಸಂಕೇತವಾದಂತೆ ಇಲಕಲ್ಲ ಸೀರೆ ಉಡುವುದು ಕೆಲವರಿಗೆ ಇಂದಿಗೂ ಒಂದು ಪರಂಪರೆಯಾಗಿದೆ. ಆದರೆ ಇದು ಉಳ್ಳವರ ಫ್ಯಾಶನ್ ಮಾತ್ರವಾಗಿ ಉಳಿಯತೊಡಗಿದೆ. ಗಿರಣಿ ಸೀರೆ ಜೊತೆ, ಕೈಮಗ್ಗದ ಸೀರೆಗಳು ಪೈಪೋಟಿ ನಡೆಸುವುದು ಕಠಿಣವಾಗಿದೆ. ಮಾರುಕಟ್ಟೆಯ ಏರಿಳಿತ, ಬರ, ಸರಕಾರದ ಧೋರಣೆ, ಯುದ್ಧ ನೇಕಾರನಿಗೆ ಒಮ್ಮೊಮ್ಮೆ ಬಲವಾದ ಪೆಟ್ಟು ಕೊಟ್ಟಿವೆ. ಆದ್ದರಿಂದ ಕೈಮಗ್ಗದ ಉದ್ದಿಮೆಯನ್ನು 'ರಕ್ಷಿತ ಉದ್ದಿಮೆ' ಎಂದು ಸರಕಾರ ಘೋಷಿಸಬೇಕೆಂದು ನೇಕಾರರ ಬೇಡಿಕೆಯಾಗಿದೆ. ಜಾಗತೀಕರಣದ ಬುಲ್‌ಡೋಜರ್ ಗೆ ಕೈಮಗ್ಗದ ಉದ್ದಿಮೆ ನಲುಗುವ ಸಾಧ್ಯತೆ ಇರುವುದನ್ನು ಅಲ್ಲಗಳೆಯುವಂತಿಲ್ಲ.

ಇಲಕಲ್ಲಿನ ಒಟ್ಟು ಜನಸಂಖ್ಯೆಯ ಮೂರನೇ ಒಂದು ಭಾಗದಷ್ಟು ಜನಕ್ಕೆ ಈ ಉದ್ದಿಮೆ ಜೀವನ ನಿರ್ವಹಣೆಯ ಮಾರ್ಗವಾಗಿದೆ. ಸುಮಾರು ಐದುಸಾವಿರ ಕೈಮಗ್ಗಗಳು ಇಲ್ಲಿವೆ. ಪ್ರತಿವರ್ಷ ಸುಮಾರು ಮೂರು ಕೋಟಿ ರೂಪಾಯಿ ಮೌಲ್ಯದ ಸೀರೆಗಳು ಉತ್ಪಾದನೆಯಾಗುತ್ತವೆ. ಇಲ್ಲಿಯ ಕೈಮಗ್ಗದ ಉದ್ದಿಮೆ ಹಲವು ಏರಿಳಿತಗಳನ್ನು ಕಂಡಿದೆ. ಭೀಕರ ಬರಗಾಲ ಬಿದ್ದಾಗ ಈ ಉದ್ಯಮ ಕುಸಿತ ಕಂಡಿದೆ. ಜಾಗತಿಕ ಯುದ್ಧಗಳ ಕಾಲದಲ್ಲಿ ಆಮದು ನಿಷೇಧ ಇದ್ದುದರಿಂದ ಇಲಕಲ್ಲ ಸೀರೆಗೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿತಂತೆ. ರೇಷ್ಮೆಯ ಬೆಲೆ ಹೆಚ್ಚಿ, ಸೀರೆಗಳ ಬೇಡಿಕೆ ಕುಸಿದಾಗ ಉದ್ದಿಮೆದಾರರು ಚಮಕಾ ಬಳಸಲು ಪ್ರಾರಂಭಿಸಿದರು. ಒಟ್ಟಿಗೆ ಇಲಕಲ್ಲ ಕೈಮಗ್ಗದ ಉದ್ದಿಮೆ ಹಲವು ಒತ್ತಡಗಳಿಗೆ ಸಿಕ್ಕು ಸೊರಗತೊಡಗಿದೆ.

ಇಲಕಲ್ಲ ಸೀರೆ ಇಂದಿಗೂ ಜನಪ್ರಿಯವಾಗಿ ಉಳಿಯಲು ಕಾರಣಗಳನ್ನು ಹುಡುಕುವದು ಕಠಿಣ. ಗಿರಣಿ ಸೀರೆಗಳ ವಿನ್ಯಾಸ ಹಾಗೂ ಬಣ್ಣಗಳಲ್ಲಿ ತೀವ್ರ ಬದಲಾವಣೆಯಾದರೂ ಇಲಕಲ್ಲ ಸೀರೆ ತನ್ನತನವನ್ನು ಉಳಿಸಿಕೊಂಡಿದೆ. ಇಲ್ಲಿಯ ನೇಕಾರ ಹೇಳುವಂತೆ ಫ್ಯಾಶನ್‌ಗಳ ಪುನರಾವರ್ತನೆಗಳಲ್ಲಿ ಇಲಕಲ್ಲ ಸೀರೆ ತನ್ನ ಅಸ್ತಿತ್ವವನ್ನು ಸಾಬೀತು ಮಾಡುತ್ತಲೇ ಬಂದಿದೆ. ಗಗನಸಖಿಯರು ಇಲಕಲ್ಲ ಸೀರೆ ಉಡಲು ಕೇಂದ್ರ ಸರಕಾರ ಒಪ್ಪಿಗೆ ನೀಡಿದೆ ಎಂದರೆ ಇದರ ಆಕರ್ಷಣೆ ಊಹಿಸಬಹುದು. ಸೀಋಎಯ ವಿನ್ಯಾಸ ಹಾಗೂ ಉಡುವ ರೀತಿಯಲ್ಲಿ ಬದಲಾವಣೆ ಆಗುತ್ತಿರಬಹುದು. ಆದರೆ ಸೀರೆ ಉಡುವುದನ್ನೇ ಜನ ಬಿಟ್ಟರೆ ಬಡನೇಕಾರ ಬದುಕುವದು ಕಠಿಣ. ಆಧುನಿಕತೆ ಹಾಗೂ ಅಭಿರುಚಿಗಳ ಬದಲಾವಣೆಗಳ ನಡುವೆ ನಿಕಟ ಸಂಬಂಧ ಇದೆ. ಆದರೂ ವಿವಾಹ, ಪವಿತ್ರ ಧಾರ್ಮಿಕ ಸಮಾರಂಭಗಳಲ್ಲಿ ಇಲಕಲ್ಲ ಸೀರೆ ಅಗತ್ಯವಾಗಿದೆ. ಜನರ ಮನದಾಳದಲ್ಲಿ ಈ ನಂಬಿಕೆ ಜೀವಂತವಾಗಿರುವವರೆಗೆ ಇಲಕಲ್ಲ ಸೀರೆ ಇದ್ದೇ ಇರುತ್ತದೆ.

ಭಾರತದಲ್ಲಿ ಗೃಹ ಕೈಗಾರಿಕೆ ಹಾಗೂ ಚಿಕ್ಕ ಉದ್ದಿಮೆಗಳಲ್ಲಿ ಕೆಲವು ಈಗಾಗಲೇ ಗೋರಿ ಸೇರಿವೆ. ಇನ್ನು ಕೆಲವು ಕ್ರಮೇಣ ಕ್ಷಯಿಸುತ್ತ ಅದೇ ದಾರಿಯಲ್ಲಿ ಸಾಗಹತ್ತಿವೆ. ಇಲಕಲ್ಲ ಸೀರೆಯನ್ನು ಎರಡನೇ ಗುಂಪಿಗೆ ಸೇರಿಸಬಹುದು. ಇದಕ್ಕೆ ಕಾಯಕಲ್ಪ ಕೊಡುವುದು ಇಂದಿನ ಅಗತ್ಯವಾಗಿದೆ. ಈ ಕ್ಷೇತ್ರ ಎದುರಿಸುವ ಸಮಸ್ಯೆಗಳು ಎಂದರೆ ಉದ್ದಿಮೆಗೆ ಬೇಕಾಗುವ ಕಚ್ಚಾ ವಸ್ತುಗಳ ಪೂರೈಕೆಯಲ್ಲಿ ಉಂಟಾಗುವ ಏರುಪೇರು, ನೂಲು, ಚಮಕಾ, ರೇಷ್ಮೆ, ಬಣ್ಣ ಹಾಗೂ ಇತರ ವಸ್ತುಗಳ ಪೂರೈಕೆಯಲ್ಲಿ ಸರಕಾರ ಒಮ್ಮೆಲೇ ಬದಲಾವಣೆ ತರುವುದು. ಅರ್ಧ ದೇಹವನ್ನು ಕುಣಿಯಲ್ಲಿ ಇಳಿಬಿಟ್ಟ ನೇಕಾರನ ಮೇಲೆ ಇದು ನೇರ ಪರಿಣಾಮ ಉಂಟುಮಾಡುತ್ತದೆ. ಸೀರೆಯ ಉತ್ಪಾದನ ವೆಚ್ಚ ಹೆಚ್ಚಿದಂತೆ ಮಾರಾಟ ಕಡಿಮೆಯಾಗುತ್ತದೆ. ನೇಕಾರ ಉಪವಾಸ ಬೀಳುತ್ತಾನೆ. ಮಧ್ಯವರ್ತಿ ಹೇಗೋ ಸುಧಾರಿಸಿಕೊಳ್ಳಬಹುದು. ಬಂಡವಾಳದ ಕೊರತೆ ಈ ಉದ್ಯಮದ ಇನ್ನೊಂದು ಸಮಸ್ಯೆಯಾಗಿದೆ. ಸಹಕಾರಿ ಸಂಘಗಳು ಕ್ಷೀಣಿಸುತ್ತಿರುವುದೇ ಬಂಡವಾಳದ ಕೊರತೆ ಹಾಗೂ ಪ್ರಾಮಾಣಿಕತೆಯ ಅಭಾವದಿಂದ. ಜೊತೆಗೆ ಸಂಕೀರ್ಣ ಕಾನೂನುಗಳು ಆಡಳಿತಾತ್ಮಕ ತೊಂದರೆ ನೀಡುತ್ತವೆ. ಕಾನೂನುಗಳನ್ನು ಸರಳೀಕರಿಸಿ ಅವುಗಳಿಗೆ ಮಾನವೀಕರಣದ ಸ್ಪರ್ಶ ನೀಡಬೇಕಾಗಿದೆ. ಇಲಕಲ್ಲ ಸೀರೆಗಳಿಗೆ ಸುವ್ಯವಸ್ಥಿತ ಮಾರುಕಟ್ಟೆಯ ಅವಶ್ಯಕತೆ ಇದೆ. ಹತ್ತಿಪ್ಪತ್ತು ಸೀರೆಗಳಿಂದ ನೂರಾರು ಸೀರೆಗಳನ್ನು ಸನಗುಗಳಲ್ಲಿ ಅಚ್ಚುಕಟ್ಟಾಗಿ ಕಟ್ಟಿ ವಿವಿಧ ಪ್ರದೇಶಗಳಿಗೆ ಇವುಗಳನ್ನು ರವಾನಿಸುವುದೆ ಕಷ್ಟದ ಕೆಲಸ. ವ್ಯಾಪಾರಸ್ಥರು ಮೊದಲು ತಮ್ಮ ಸೀರೆಗಳನ್ನು ರವಾನಿಸಿ ಎರಡು ಮೂರು ತಿಂಗಳ ನಂತರ ಹಣ ವಸೂಲಿಗೆ ಹೋಗುತ್ತಾರೆ. ಅನಿರೀಕ್ಷಿತ ಲಾಭ ಹಾನಿ ಮಾರುಕಟ್ಟೆಯ ಅನಿಶ್ಚಿತತೆ ಹಣ ವಸೂಲಿಯ ಮೇಲೆ ಪ್ರಭಾವ ಬೀರುತ್ತವೆ. ಜೊತೆಗೆ ಆತಂಕಕಾರಿ ಸ್ಪರ್ಧೆಯೂ ಇದೆ. ಆದ್ದರಿಂದ ಸಮತೋಲಿಕ ಮಾರುಕಟ್ಟೆಯ ಅಗತ್ಯ ಇದೆ. ನೇಕಾರನ ಅಜ್ಞಾನ, ನಿರಕ್ಷರತೆ,  ಸಂಘಟನೆಯ ಕೊರತೆ, ದುರಭ್ಯಾಸ, ಅನಾರೋಗ್ಯ, ಗುಣಮಟ್ಟದ ಅಭಾವ ಮುಂತಾದವುಗಳು ಈ ಉದ್ದಿಮೆಗೆ ತೊಂದರೆ ಉಂಟು ಮಾಡುತ್ತಿವೆ. ಒಮ್ಮೆ ಗಳಿಗೆ ಹಾಕಿದ ಸೀರೆಯನ್ನು ವ್ಯಾಪಾರಸ್ಥ ಪೂರ್ಣ ಬಿಚ್ಚಿ ತೋರಿಸಲಾರ. ಆದ್ದರಿಂದ ಪ್ಯಾಕಿಂಗ್ ವ್ಯವಸ್ಥೆಯಲ್ಲಿ ಸೂಕ್ತ ಮಾರ್ಪಾಡು ತರಬೇಕಾಗಿದೆ.

ಭಾರತದ ನೇಕಾರಿಕೆಯ ಇತಿಹಾಸದಲ್ಲಿ ಢಾಕಾದ ಮಸ್ಲಿನ್ ಬಟ್ಟೆ ಐತಿಹಾಸಿಕ ಖ್ಯಾತಿ ಪಡೆದಿದೆ. ಔರಂಗಜೇಬನ ಮಗಳು ಹದಿನೆಂಟು ಪದರಿನ ಸೀರೆ ಉಟ್ಟರೂ ಸೀರೆ ಪಾರದರ್ಶಕವಾಗಿದ್ದ ಚರಿತ್ರೆ ಇದೆ. ನೇಕಾರನ ಸೃಜನಶೀಲತೆ ಹಾಗೂ ಕಲೆ ಸಾಯದಂತೆ ನೋಡಿಕೊಳ್ಳುವುದು ಸಮಾಜದ, ಸರಕಾರದ ಹೊಣೆಯಾಗಿದೆ. ಸಂಗೀತ, ಶಿಲ್ಪ, ನೃತ್ಯ ವಿವಿಧ ಭಾಷೆಗಳ ಅಕಾಡೆಮಿ ಹಾಗೂ ಇತರ ಸಂಸ್ಥೆಗಳಿವೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಈ ಸಂಸ್ಥೆಗಳು ಗುರುತಿಸಿ ಗೌರವಿಸುತ್ತವೆ. ಆದರೆ ನೇಕಾರನನ್ನು ಗುರುತಿಸುವ ಯಾವ ಸಂಸ್ಥೆಗಳೂ ಇಲ್ಲ. ಕೊನೆಗೆ ಸರಕಾರ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ, ರಾಜ್ಯೋತ್ಸವ ಮುಂತಾದ ಸಂದರ್ಭಗಳಲ್ಲಿ ಪ್ರಶಸ್ತಿ ನೀಡುವಾಗ ನೇಕಾರರನ್ನು ಪರಿಗಣನೆಗೆ ತೆಗೆದುಕೊಳ್ಳಬಹುದು.

# ಅನುಬಂಧ ೧ – ಕೈಮಗ್ಗದ ಸಲಕರಣೆಗಳು

೧. ಅಲ್ವಿ-ಬಿದಿರಿನ ಸಾಧನ
೨. ಕೈ ರಾಟಿ-ಮುದ್ದಿ
೩. ಕಾಂಡಕಿ ಸುತ್ತುವ ರಾಟಿ
೪. ರಾಟ್ಸ್ಯಾಳ
೫. ಹಾಸು ಹೊಯ್ಯುವ ಹರಿ (ಪಾಗಡಿ ರಾಟಿ)
೬. ಟಾನಹರಿ
೭. ಕೆಚಗುಣಕಿ
೮. ಗೋಡಾ
೯. ಕುಂಟಿ
೧೦. ಶೆಟಲ್
೧೧. ಹೊಕ್ಕಳ ಗೂಟ
೧೨. ಕಿವಿಗೂಟ
೧೩. ಅರದಂಡಿಗೆ
೧೪. ಪಿಂಜರ
೧೫. ಹಗ್ಗದ ಗೂಟ
೧೬. ಹಣಗಿ
೧೭. ತಂತಿ ಬೆಜ-ಕೈ ಬೆಜ
೧೮. ಶೆಳ್ಳು
೧೯. ಶಲಿಗಿ ಶೆಳ್ಳು
೨೦. ಲಾಳಿ-ಕೈ ಲಾಳಿ
೨೧. ಚುಂಗಿ ಕೋಲು
೨೨. ಪೇಟಿ ಕೋಲು
೨೩. ವೈಂಡಿಂಗ್ ಮಶಿನ್
೨೪. ಗಾಡಾ
೨೫. ಕಾಲ್ಪಡಿ
೨೬. ಶೇಡಕಟಗಿ
೨೭. ಉಡಾತ್ರ
೨೮. ಪಿಡಚಿ

೧೯. ನೇಯ್ಗೆ ಹಗ್ಗ

೨೦. ಕುಂಚ

೨೧. ಪಳಿಗಟಿಗಿ

೨೨. ತಟ್ಟು-ಬೆಜ

೨೩. ಶೆಟಲ್‌ಗಣಿ

೨೪. ಕೈಗೂಟ  (ರಾಮಲಿಂಗ ಗೂಟ)

೨೫. ಮಗ್ಗದ ಕುಣಿ.

## ಅನುಬಂಧ ೨ – ನೇಕಾರ ವೃತ್ತಿಯ ಗಾದೆಗಳು

೧. ನೇಕಾರನ ಹೆಂಡತಿ ಬತ್ತಲೆ

೨. ಒಂದು ಅಣಿ ತಪ್ಪಿದರೆ ಸಾವಿರ ಅಣಿ ತಪ್ಪುತ್ತವೆ.

೩. ಜಾಡನ್ನs ಬಿಟ್ಟು ನೋಡು ಮಂಗನ್ನ ಕಟ್ಟಿ ನೋಡು

೪. ಜಾಡ ದೈವ ಅಲ್ಲ ಕೋಣ ಬಸವಣ್ಣನಲ್ಲ.

೫. ಲಾಳಿ ಮೇಲೆ ಲಾಳಿ ಒಗೆದರೆ ಬ್ಯಾಳಿ ರೊಟ್ಟಿಗೆ ಚಿಂತೆ ಇಲ್ಲ

೬. ನೇಯ್ದದ್ದೇ ಸೀರೆ ಉಳಿದದ್ದೇ ಕರಿ.

೭. ನೇಯ್ದರೆ ಬಟ್ಟೆ, ಕಟ್ಟಿದರೆ ಮಟ್ಟಿ

೮. ನೇಯ್ಗೆ ನೇಯ್ದಂತೆ ಕೂಡಿತ್ತಲ್ಲದೆ ನೆಗೆದರೆ ಕೂಡೀತೆ?

೯. ನೇಯ್ಗೆ ನಯವಿದ್ದರೆ ನಾಣ್ಯ ಸಿಕ್ಕೀತು.

೧೦. ನೇಯುವವನ ಕೈ ಓದುವವನ ಬಾಯಿ ಚುರುಕಾಗಿರಬೇಕು.

೧೧. ನೇಯ್ಗೆವನ ಮಟ್ಟ ಕಟ್ಟುವವ ಬಲ್ಲ.

೧೨. ನೇಯ್ಗೆವನಿಗೆ ಯಾಕೆ ಕೋತಿಮರಿ?

೧೩. ನೇಯುವವನಿಗೆ ಲಾಳಿ ನಗಕ್ಕೆ ಗಾಳಿ.

೧೪. ನೂತದ್ದೆಲ್ಲಾ ಹಂಜಿ ಕಲಿತದ್ದೆಲ್ಲಾ ಗಂಜಿ

೧೫.  ನೂಲಿಗೆ ತಕ್ಕ ಸೀರೆ ಸಾಲಿಗೆ ತಕ್ಕ ಎಡೆ.

೧೬. ನೂಲು ಹಿಡಿದು ಜೋಲುವವನ ಕಾಲು ಹಿಡಿದು ನೇತಾಡಿದ.

೧೭. ನೂಲೊ ಹೆಂಡತಿ ಬಿಟ್ಟು ಹೇಲೊ ಮಾಳಿಯ ತಂದ.

೧೮. ಕುಣಿಯಲ್ಲಿ ಕೂತವ ಹೆಣ ಅಲ್ಲ ಬಟ್ಟೆ ಹರಿಯುವವ ಹುಚ್ಚನಲ್ಲ.

೧೯. ತಾಯಿಯಂತೆ ಮಗಳು ನೂಲಿನಂತೆ ಸೀರೆ.

೨೦. ಅಜ್ಜಿ ನೂತದ್ದು ಮೊಮ್ಮಗನ ಉಡದಾರಕ್ಕೆ.

## ಆಕರ ಗ್ರಂಥಗಳು

೧. ಇಲಕಲ್ಲ ನಗರಸಭೆ ಶತಮಾನೋತ್ಸವ ಸ್ಮಾರಕ ಸಂಪುಟ ಇಲಕಲ್ಲ-೧೯೭೮
೨. ಕರ್ನಾಟಕ ರಾಜ್ಯ ಜೇಸಿಸ್ ಮೂರನೆ ಪ್ರಾದೇಶಿಕ ಸಮ್ಮೇಳನ ಇಲಕಲ್ಲ ೧೯೮೮
೩. ಸುವರ್ಣ ಸಂಭ್ರಮ ಸ್ಮರಣ ಸಂಚಿಕೆ, ಶ್ರೀ ಶಾಕಂಬರಿ ನೇಕಾರ ಸಹಕಾರಿ ಸಂಘ, ಸೂಳೇಬಾವಿ-೧೯೯೮
೪. ರಜತ ಮಹೋತ್ಸವ ಸ್ಮರಣ ಸಂಚಿಕೆ, ಇಲಕಲ್ಲ ಪಟ್ಟಣ ಸಹಕಾರಿ ಬ್ಯಾಂಕ್೧೯೯೮
೫. ಪದ್ಮಶಾಲಿ-ಮಾಸಪತ್ರಿಕೆ, ದೀಪಾವಳಿ ಸಂಚಿಕೆ, ೧೯೯೫
೬. ಸೀರೆ ಸೆರಗಿನಲ್ಲಿ ಭುವನೇಶ್ವರಿ-ಪ್ರಜಾವಾಣಿ ೨೦-೧೧-೯೯
೭. ಕಿಟಲ್ ಕೋಶದ ಗಾದೆಗಳು ಸಂ-ರಾ.ಗೌ. ಉಷಾ ಸಾಹಿತ್ಯಮಾಲೆ, ಮೈಸೂರು.
೮. ಕನ್ನಡ ಗಾದೆಗಳ ಕೋಶ, ಟಿ.ವಿ. ವೆಂಕಟರಮಣ್ಯ, ಸಮಾಜ ಪುಸ್ತಕಾಲಯ, ಧಾರವಾಡ.
೯. ಅಖಿಲ ಕರ್ನಾಟಕ ದೇವಾಂಗ ಸಮ್ಮೇಳನ-ಸ್ಮರಣ ಸಂಚಿಕೆ-೧೯೭೨.
೧೦. ಇಲಕಲ್ಲ ಜ್ಯೂನಿಯರ್ ಚೇಂಬರ್ ದಶಮಾನೋತ್ಸವ ಸ್ಮರಣ ಸಂಚಿಕೆ-೧೯.

## ಛಾಯಾಚಿತ್ರಗಳು



ನೂಲಿಗೆ ಬಣ್ಣ ಹಾಕುವದು



ಕಾಂಡಕಿ ಸುತ್ತುವದು





ಹಾಸು ಸಿದ್ದಪಡಿಸುವದು

ಹಣೆಗೆ ಕೆಚ್ಚುವದು





ಮಗ್ಗದ ಕುಣಿಯಲ್ಲಿ ನೆಯ್ಯುವದು

ಸೀರೆ ಸೆರಗಿನಲ್ಲಿ ಭುವನೇಶ್ವರಿ



ಹಾಸು ಸಿದ್ಧ ಮಾಡುವದು



ಹಾಸು ಹಣೆಗೆ ಜೋಡಣೆ